ಮುಸ್ಲಿಮರ ಹಬ್ಬಗಳು

ಲೇ. ಡಾ| ಫೌಝಿಯಾ ಸುಲ್ತಾನಾ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಇಸ್ಲಾಮಿನಲ್ಲಿ ಹಬ್ಬಗಳು ಎರಡು ಮಾತ್ರ. ಈದುಲ್ ಫಿತ್ರ್ ಮತ್ತು ಈದುಲ್ ಅಝ್‌ಹಾ. ರಮಝಾನ್‌ನ ಪೂರ್ತಿ ತಿಂಗಳು ಉಪವಾಸ ಆಚರಿಸಿದ ಮತ್ತು ಅಲ್ಲಾಹನ ಧರ್ಮದಲ್ಲಿ ನಡೆಯಲು ಹೊಸ ಸ್ಫೂರ್ತಿಯನ್ನು ಮೈಗೂಡಿಸಿಕೊಂಡ ಅಲ್ಲಾಹನ ನಿಷ್ಠದಾಸರಿಗೆ ಸಂತೋಷವನ್ನಾಚರಿಸಲಿಕ್ಕಾಗಿ ಮತ್ತು ಅಲ್ಲಾಹನು ತಮ್ಮ ಮೇಲೆ ಮಾಡಿದ ಮಹಾ ಉಪಕಾರಕ್ಕಾಗಿ ಕೃತಜ್ಞತೆ ಸಲ್ಲಿಸುವ ಸಲುವಾಗಿ 'ಈದುಲ್ ಫಿತ್ರ'ನ್ನು ಸಂತೋಷದ ದಿನವನ್ನಾಗಿ ಆಚರಿಸಲು ಅಲ್ಲಾಹನು ನಿಶ್ಚಯಿಸಿರುವನು. ಅದೇ ರೀತಿ ಜಾಗತಿಕ ಮುಸ್ಲಿಮರ ಏಕತೆಯ ಸಂಕೇತವಾಗಿರುವ ಹಜ್ಜ್ ಕರ್ಮವನ್ನು ನೆರವೇರಿಸಲಾಗುವ 'ದುಲ್‌ಹಜ್ಜ್' ತಿಂಗಳ 10ನೆಯ ದಿನಾಂಕವನ್ನು 'ಈದುಲ್ ಅಝ್‌ಹಾ' ಎಂಬ ಹೆಸರಿನಲ್ಲಿ ಆಚರಿಸಲು ಮುಸ್ಲಿಮರಿಗೆ ಆದೇಶಿಸಲಾಗಿದೆ. ಈದ್ ಆಚರಣೆಯು ಎಷ್ಟು ಮಹತ್ವದ್ದೆಂದರೆ ಅಂದು ಕೃತಜ್ಞತೆಯ ರೂಪದಲ್ಲಿ ಎರಡು ರಕಅತ್ ಈದ್ ನಮಾಝ್ ನಿರ್ವಹಿಸುವುದನ್ನು ವಾಜಿಬ್ (ಕಡ್ಡಾಯ) ಮಾಡಲಾಗಿದೆ. ಅಂದು ಉಪವಾಸ ಆಚರಿಸುವುದು ಪಾಪಕಾರ್ಯವಾಗಿದೆ.

ಆದರೆ ಇಂದು ಮುಸ್ಲಿಮ್ ಸಮುದಾಯದಲ್ಲಿ ಕೆಲವರು ಕೆಲವು ವಿಶೇಷ ದಿನಗಳನ್ನು ಹಬ್ಬದ ರೂಪದಲ್ಲಿ ಆಚರಿಸಿಕೊಂಡು ಬರುತ್ತಿರುವುದು ದುರದೃಷ್ಟಕರ. ಶರೀಅತ್‌ನಲ್ಲಿ ಆ ದಿನಗಳಿಗೆ ಯಾವುದೇ ಮಹತ್ವವಿಲ್ಲ. ಅವು ಹಬ್ಬಗಳಾಗಲು ಸಾಧ್ಯವಿಲ್ಲ. ಆದರೆ ಅವುಗಳನ್ನು ಶರೀಅತ್‌ನ ಭಾಗವೆಂಬಂತೆ ವಿಶೇಷ ಪ್ರಾರ್ಥನೆಗಳು, ವಿಶೇಷ ಉಪವಾಸಗಳೊಂದಿಗೆ ಜೋಡಿಸಿಕೊಂಡು ವೈಭವಪೂರ್ಣವಾಗಿ ಆಚರಿಸುತ್ತಿರುವುದು ಕಂಡುಬರುತ್ತದೆ. ಮುಸ್ಲಿಮರು ಯಾವೆಲ್ಲ ದಿನಗಳನ್ನು ಹಬ್ಬದ ರೂಪದಲ್ಲಿ ಆಚರಿಸುತ್ತಾರೆ. ಅವರು ನಿಜವಾಗಿ ಯಾವ ಹಬ್ಬಗಳನ್ನು ಆಚರಿಸಲು ಬಾಧ್ಯಸ್ತರು ಎಂಬುದನ್ನು ಬಳ್ಳಾರಿಯ ಡಾ| ಫೌಝಿಯಾ ಸುಲ್ತಾನಾ 'ಮುಸ್ಲಿಮರ ಹಬ್ಬಗಳು' ಎಂಬ ಈ ಕೃತಿಯಲ್ಲಿ ಬಹಳ ಸುಂದರವಾಗಿ ವಿಶ್ಲೇಷಿಸಿದ್ದಾರೆ. ವಾಚಕರ ಕೈಯಲ್ಲಿರುವ ಈ ಕೃತಿಯು ಇದರ ಎರಡನೆಯ ಆವೃತ್ತಿಯಾಗಿದೆ. ಇದರ ಅಧ್ಯಯನದಿಂದ ವಾಚಕರಿಗೆ ಹಬ್ಬಗಳ ಕುರಿತಾದ ಆಚಾರಗಳ ವಾಸ್ತವಿಕತೆಯನ್ನು ಗ್ರಹಿಸಲು ಸುಲಭವಾಗಬಹುದೆಂದು ನಿರೀಕ್ಷಿಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಹಬ್ಬಗಳ ಮಹತ್ವ

ನಿರಂತರ ದೈನಂದಿನ ಕೆಲಸ ಕಾರ್ಯಗಳಿಂದ ಬೇಸತ್ತ ಮನುಷ್ಯನು, ವರ್ಷದಲ್ಲಿ ಕೆಲವು ಸಲ ತನ್ನ ಈ ಕೆಲಸಗಳ ಒತ್ತಡಗಳನ್ನು ಬದಿಗೊತ್ತಿ, ಸಂತೋಷಪಡುವ, ಹರ್ಷೋಲ್ಲಾಸವನ್ನು ಅನುಭವಿಸುವ ಕೆಲವು ದಿನಗಳು ಬರಬೇಕೆಂದು ಬಯಸುವುದು ಪ್ರಕೃತಿ ಸಹಜ. ದೈನಂದಿನ ಏಕತಾನತೆಗೆ ಹಬ್ಬಗಳೇ ಸರಿಯಾದ ಚಿಕಿತ್ಸೆ. ಹಬ್ಬಗಳನ್ನಾ ಚರಿಸದ ಒಂದೇ ಒಂದು ಜನಾಂಗ ಅಥವಾ ಪ್ರದೇಶವು ನೋಡಲು ಸಿಗುವುದಿಲ್ಲ. ಪ್ರಾಂತೀಯ ಅಥವಾ ನಾಡಹಬ್ಬಗಳು, ಧಾರ್ಮಿಕ ಹಬ್ಬಗಳು ಮತ್ತು ರಾಷ್ಟ್ರೀಯ ಹಬ್ಬ.... ಇತ್ಯಾದಿಗಳನ್ನಿಂದು ಕಾಣುತ್ತೇವೆ.

ಈ ಆಧುನಿಕ ಹಾಗೂ ಯಾಂತ್ರಿಕ ಜಗತ್ತಿನಲ್ಲಿ ಮಧ್ಯಮ ವರ್ಗದವರು ಮೊದಲಿನಂತೆ ಹಬ್ಬಗಳನ್ನು ವಿಧಿವತ್ತಾಗಿ ಆಚರಿಸಲು ಆರ್ಥಿಕ ಹಾಗೂ ಸಮಯದ ಅಡಚಣೆಗಳಿವೆ. ಹಾಗಾಗಿ ಸಾಂಪ್ರದಾಯಿಕ ಹಬ್ಬಗಳನ್ನು ಕಾಟಾಚಾರಕ್ಕೆ ಆಚರಿಸು ವವರಿದ್ದಾರೆ. ಇದೇ ಈಗ 'ಡಾಟ್ ಕಾಮ್‌ನ' ಭರಾಟೆಯಲ್ಲಿ ಶ್ರೀಮಂತರಾದವರಲ್ಲಿ ಕೆಲವರಿಗೆ 'ಕ್ಲಬ್'ನವರು ಹೇಳಿದಂದೇ ಹಬ್ಬ. ಸಾಸಿವೆ ಕಾಳಿನಷ್ಟು ನೆಪ ಸಿಕ್ಕರೆ ಸಾಕು, ಹಣ ಸುರಿಸಿ ಸಂಭ್ರಮಿಸಿ 'ಇದುವೇ ಹಬ್ಬ' ಎಂದು ಕೊಳ್ಳುವವರಿದ್ದಾರೆ. ಈ ಗೊಂದಲ ಗಡಿಬಿಡಿಗಳ ನಡುವೆ ಹಬ್ಬಗಳ ಮಹತ್ವ, ನಮ್ಮ ಜೀವನದಲ್ಲಿ ಅವುಗಳ ಪಾತ್ರ ಹಾಗೂ ಹಬ್ಬಗಳ ಸ್ಫೂರ್ತಿಯನ್ನು ಅರಿಯುವ ನಿಜವಾದ ಕಳಕಳಿ ಯಾರಿಗೂ ಇಲ್ಲದಂತಿರುವುದು ವಿಷಾದನೀಯ ಬೆಳವಣಿಗೆ.

ಹಬ್ಬಗಳಿಗಾಗಿ ರಜೆ ಸಿಗುವುದು ಸರಿಯಷ್ಟೇ. ರಜೆ ಅರ್ಥಾತ್ 'ಹಾಲಿಡೇ(Holiday) ಎನ್ನುವ ಪದವು ಮೂಲತಃ 'ಹೋಲೀ ಡೇ'(Holy-day ಪವಿತ್ರ ದಿನ) ಎಂಬ ಪದದಿಂದ ಪ್ರೇರಿತವಾಗಿರುವುದು ಹಬ್ಬಗಳ ಇತಿಹಾಸದೆಡೆಗೆ ಬೊಟ್ಟು ಮಾಡುತ್ತದೆ.

'ಹಬ್ಬ' (ಇಂಗ್ಲೀಷ್-Festival, ಮೂಲ ಲ್ಯಾಟಿನ್ ಪದ-Festivalia) ಎಂದರೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕಲೆಗಳನ್ನು ಆಚರಿಸುವುದಾಗಿತ್ತು. 'ಬೈಜಂಟೈನ್ ಕಲೆ'ಯ ಹಬ್ಬವು ಚರ್ಚಿಗೆ ಸಂಬಂಧಿಸಿ, 12 ಮಹಾನ್ ಹಬ್ಬಗಳನ್ನು ಸರಣಿಯ ರೂಪದಲ್ಲಿ ಹೊಂದಿತ್ತು. ಪ್ರಾಚೀನ ರೋಮನ್ ಹಬ್ಬಗಳಾದ 'ಫೆರಿಯಾ'(Feriae) ಸಾರ್ವಜನಿಕ ರಜೆ, ಔತಣಕೂಟ, ಪ್ರಾರ್ಥನೆ ಮತ್ತು ಪ್ರಾಣಿಬಲಿಗಳನ್ನು ಒಳಗೊಂಡಿದ್ದು ಪ್ರತಿ ವರ್ಷದ ನಿಗದಿತ ದಿನಗಳಂದು ಆಚರಿಸಲಾಗುತ್ತಿತ್ತು. **(ದಿ ಮ್ಯಾಕ್‌ಮಿಲನ್ ಎನ್‌ಸೈಕ್ಲೋಪೀಡಿಯಾ ಪುಟ: 200)**

ವಿಶ್ವದ ಎಲ್ಲ ಪ್ರಾಚೀನ ನಾಗರಿಕತೆಗಳ ಹಬ್ಬಗಳಲ್ಲಿರುವ ಸಾಮಾನ್ಯ ಅಂಶಗಳೆಂದರೆ, ಕೆಲಸದಿಂದ ರಜೆ, ನೃತ್ಯ, ಗಾಯನ, ನಾಟಕಗಳಲ್ಲದೆ ವೈಭವಯುತ ಮೆರವಣಿಗೆಗಳನ್ನು ಪ್ರಾರಂಭಿಸಲಾಯಿತು, ಉದಾ: 'ಬುಸಿರಿಸ್'ನ ಹಬ್ಬ 'ಐಸಿಸ್', 'ಮಾರ್ಸ್' ಮತ್ತು 'ಪ್ಯಾಪ್ರೋನಿಸ್', ಈಜಿಪ್ಟ್ ಮತ್ತು ಫಿಯೋನೇಶಿಯಾ ಹಾಗೂ ಗ್ರೀಕ್‌ನ 'ಅಡೋನಿಯಾ.' ಈ ಹಬ್ಬಗಳು ದೈವಿಕ ಕೋಪ ತಾಪಗಳನ್ನು ತಣಿಸುತ್ತವೆ ಎಂದು ನಂಬಲಾಗುತ್ತಿತ್ತು, ಅದಕ್ಕೆಂದೇ ಕೆಲವೆಡೆ ಪ್ರಾಣಿಬಲಿ, ಕೆಲವೆಡೆ ಮಾನವ ಬಲಿ ಹಾಗೂ ಅನಿರ್ಬಂಧಿತ ಲೈಂಗಿಕತೆಗಳನ್ನು ಕೈಗೊಳ್ಳಲಾಗುತ್ತಿತ್ತು.

ಸಾಮಾನ್ಯವಾಗಿ ಎಲ್ಲ ನಾಗರಿಕತೆಗಳಲ್ಲಿ ಹಬ್ಬಗಳ ಇತಿಹಾಸ ದೊರೆಯುತ್ತದೆ. ಆದರೆ ಪ್ರಾಚೀನ ಪರ್ಶಿಯನರಲ್ಲಿ ಮಾತ್ರ ಹಬ್ಬಗಳ ಇತಿಹಾಸ ದೊರೆಯುವುದಿಲ್ಲ, ಏಕೆಂದರೆ ಆಗ ಅವರಲ್ಲಿ ದೇವಾಲಯಗಳಾಗಲೀ, ಸಾಮೂಹಿಕ ಆರಾಧನೆಗಳಾಗಲೀ ಇರಲಿಲ್ಲ. ಪ್ರಾಚೀನ ಮೆಕ್ಸಿಕನರಲ್ಲಿ ಬೇಕಾದಷ್ಟು ಹಬ್ಬಗಳಿದ್ದು ಮುಖ್ಯವಾಗಿ 'ಸ್ಥಿರ' ಮತ್ತು 'ಚರ' ಹಬ್ಬಗಳಾಗಿ ವಿಂಗಡಿಸಲ್ಪಟ್ಟಿದ್ದವು. 'ಗ್ರೀಸ್' ದೇಶದಲ್ಲಿ 'ಇಲಿಯಾಡ್'ನ ಸಮಯದಲ್ಲಿ ಕೇವಲ 'ಹಾರ್ವೆಸ್ಟ್' ಮತ್ತು 'ವಿಂಟೇಜ್' ಎಂಬ ಎರಡು ಪ್ರಮುಖ ಹಬ್ಬಗಳಿದ್ದವು. **(ಇಲಿಯಾಡ್ ix 250)**

ಪ್ರಾಚೀನ ರೋಮ್‌ನಲ್ಲಿ ರೋಮನ್ ಸಾಮ್ರಾಜ್ಯ ವಿಸ್ತಾರಗೊಂಡಂತೆಲ್ಲ ಅನ್ಯ ಪ್ರದೇಶಗಳ ಆರಾಧ್ಯರನ್ನು ಸ್ವೀಕರಿಸಿ ಉತ್ಸವಗಳನ್ನಾಚರಿಸುತ್ತಿದ್ದರು. ಅವುಗಳಲ್ಲಿ ಪ್ರಮುಖವಾಗಿ 'ಸೆಮೆನ್‌ಟಿನಾಯ್'(25ನೇ ಜನವರಿ), ಹೊಲಗಳಲ್ಲಿ ಬೀಜ ಬಿತ್ತುವ ಸಮಯದ ನಾಟಿ ಹಬ್ಬ, 'ಪ್ಯಾನ್' ದೇವತೆಗೆ ಗೌರವ ಸಲ್ಲಿಸುವ 'ಲ್ಯೂಪರ್ ಕಾಲಿಯಾ' ಹಬ್ಬ, 'ಬೊನಾಡಿಯಾ'ನ ಹಬ್ಬವಾದ 'ಸೆರೆಲಿಯಾ', 'ಮ್ಯಾಟ್ರೊನಾಲಿಯಾ' 'ಮಿನರ್‌ವಾಲಿಯಾ' 'ಜನ್ಯೂವಾಲಿಯಾ' (1ನೇ ಜನವರಿ), 'ಕ್ಯೂರಿನಾಲಿಯಾ, ಮತ್ತು 'ಸ್ಯಾಟರ್ನಾಲಿಯಾ' (19ನೇ ಡಿಸೆಂಬರ್) ಇತ್ಯಾದಿ. **(ಚೇಂಬರ್ಸ್ ಎನ್‌ಸೈಕ್ಲೊಪೀಡಿಯಾ V)**

ಪ್ರಾಚೀನ ಹಬ್ಬಗಳು ಧಾರ್ಮಿಕ ಮತ್ತು ಸಾಮಾಜಿಕ ಮಹತ್ವವನ್ನು ಹೊಂದಿದ್ದವು. ಗ್ರೀಕ್ ಅಥವಾ ಮೆಸಪಟೋಮಿಯಾ ನಗರದ ಸಾರ್ವಭೌಮತ್ವವನ್ನು ಸ್ಥಳೀಯ ದೇವತೆಗಳ ಆರಾಧನೆಗಳಿಂದ ಆಚರಿಸಲಾಗುತ್ತಿತ್ತು. ಆದರೆ ವಿಶಾಲವಾದ ರಾಜಕೀಯ ಉದ್ದೇಶಗಳನ್ನು, ಸ್ಥಳೀಯ ಹಬ್ಬಗಳನ್ನು ರಾಷ್ಟ್ರೀಯ ಹಬ್ಬಗಳಿಗೆ ಅಧೀನವಾಗಿಸಿ ಆಚರಿಸಲಾಗುವ ಮೂಲಕ ಈಡೇರಿಸಲಾಗುತ್ತಿತ್ತು.

'ತೊಬ್ರಿಯಾಂಡ್' ನಡುಗಡ್ಡೆಯ ಊರದೇವತೆಯ ಉತ್ಸವ 'ಬಾಲೋಮಾ'ನಲ್ಲಿ ಮೃತರ ಆತ್ಮಗಳನ್ನು 'ಸುಗ್ಗಿಯ ಹಬ್ಬ'(harvest)ಕ್ಕಾಗಿ ಆಮಂತ್ರಿಸಲಾಗುತ್ತಿತ್ತು. ಔತಣ ಹಾಗೂ ನರ್ತನದ ನಂತರ ಅವುಗಳನ್ನು ಮತ್ತೆ ಹಿಂತಿರುಗಿಸಿದ್ದೇವೆಂದು ಭಾವಿಸುವ ಮೂಲಕ ಮೃತ ಮತ್ತು ಜೀವಂತ ಆತ್ಮಗಳ ಸಮ್ಮಿಲನವಾಗುತ್ತದೆಂದು ಭಾವಿಸಲಾಗುತ್ತಿತ್ತು.

1939-1945ರ ಪ್ರಥಮ ವಿಶ್ವಯುದ್ಧದ ನಂತರ ಹಬ್ಬಗಳು ಪ್ರವಾಸೋದ್ಯಮದ ಅಭಿವೃದ್ಧಿಯೊಂದಿಗೆ ನಿಕಟವಾಗಿ ಹೊಂದಿಕೊಂಡಿವೆ. ಸಾಮಾನ್ಯವಾಗಿ ಯಾವುದೇ ತರದ

ಪ್ರವಾಸಿ ಆಕರ್ಷಣೆಯನ್ನು ಹೊಂದಿದ ನಗರಗಳು ಆಯಾ ನಗರಗಳ ಹೆಸರಿನಲ್ಲಿ ಉತ್ಸವಗಳನ್ನು ಏರ್ಪಡಿಸಿ ಪ್ರವಾಸಿಗರನ್ನು ಆಕರ್ಷಿಸಲು ಪ್ರಯತ್ನಪಡುತ್ತಿವೆ. ಉದಾ: ಎಡಿನ್ ಬರೊ ಉತ್ಸವ, ಹಾಲೆಂಡ್ ಉತ್ಸವ, ಮ್ಯೂನಿಚ್ ಉತ್ಸವ, ಬೋಸ್ಟನ್ ಉತ್ಸವ ಇತ್ತೀಚೆಗೆ 'ದುಬೈ ಉತ್ಸವ'ವನ್ನು ಬೃಹತ್ ವಾಣಿಜ್ಯೋತ್ಸವದ ರೂಪದಲ್ಲಿ ಆಚರಿಸಲಾಗುತ್ತಿದೆ. ಕರ್ನಾಟಕದಲ್ಲಿ ಕೂಡ ಇತ್ತೀಚೆಗೆ ಪ್ರವಾಸಿ ಆಕರ್ಷಣೆಗಾಗಿ ಜಿಲ್ಲಾವಾರು ಉತ್ಸವಗಳನ್ನು ಆಚರಿಸಲಾಗುತ್ತಿದೆ, ಉದಾ: ಕರಾವಳಿ ಉತ್ಸವ, ಹಂಪಿ ಉತ್ಸವ.... ಇತ್ಯಾದಿ.

ವಿಶಿಷ್ಟ ಉದ್ದೇಶದ ಉತ್ಸವಗಳು (theme festival) ಇತ್ತೀಚೆಗೆ ಹೆಚ್ಚುತ್ತಿವೆ, ಉದಾ; ಸಂಗೀತೋತ್ಸವ, ನೃತ್ಯೋತ್ಸವ.... ಇತ್ಯಾದಿ. ಆದರೆ ಇವುಗಳ ಇತಿಹಾಸ ತುಂಬಾ ಪ್ರಾಚೀನವಾಗಿದೆ. ಸಂಗೀತೋತ್ಸವದ ಇತಿಹಾಸ ಕ್ರಿಸ್ತಪೂರ್ವ 6ನೆಯ ಶತಮಾನದಲ್ಲಿ ದೊರೆಯುತ್ತದೆ. ಸಂಗೀತ ಮತ್ತು ನೃತ್ಯೋತ್ಸವವಾಗಿ ಪ್ರಸಿದ್ಧಿ ಪಡೆದ 'ಆಸ್ಟ್ರಿಯಾ'ದ 'ಸಾಲ್ಜ್ ಬರ್ಗ್' ಉತ್ಸವವು 1877-1910ರ ಮಧ್ಯದಲ್ಲಿ ಹೆಸರುವಾಸಿಯಾಗಿತ್ತು. ಇದೇ ತರದ ಅನೇಕ ಉದಾಹರಣೆಗಳು ಕಾಣಸಿಗುತ್ತವೆ.... ಉದಾ: 'ನ್ಯೂಪೋರ್ಟ್ ಜಾಜ್' ಉತ್ಸವ, ಇಟಲಿಯ 'ಸ್ಪೋಲೆಟೋವ' ಉತ್ಸವ, 'ಭಾರತದ ಶಾಸ್ತ್ರೀಯ ಸಂಗೀತೋತ್ಸವಗಳು... ಇತ್ಯಾದಿ. ಈ ವಿಶಿಷ್ಟ ಉದ್ದೇಶದ ಉತ್ಸವಗಳ ಸಾಲಿಗೆ ಇತ್ತೀಚೆಗೆ 'ಫುಡ್ ಫೆಸ್ಟಿವಲ್'ಗಳು ಸೇರಿಕೊಂಡಿವೆ. ಆಯಾ ಪ್ರದೇಶದ ವಿಶಿಷ್ಟ ಪಾಕ ಶೈಲಿಯ ಹೆಸರಿನಲ್ಲಿ ಈ ಉತ್ಸವಗಳನ್ನು ಆಚರಿಸಲಾಗುತ್ತಿದ್ದು ಅವುಗಳಲ್ಲಿ ನೂರಾರು ಬಗೆ ಇವೆ. ಉದಾ: ಥೈಫುಡ್ ಫೆಸ್ಟಿವಲ್,... ಚೆಟ್ಟಿನಾಡ್ ಫುಡ್ ಫೆಸ್ಟಿವಲ್, ಮೊಘಲ್ ಫುಡ್ ಫೆಸ್ಟಿವಲ್... ಇತ್ಯಾದಿ.

ಈ ವಿಶಿಷ್ಟ ಉದ್ದೇಶದ ಉತ್ಸವಗಳು ಕಾಲದ ಅಭಿರುಚಿಗೆ ತಕ್ಕಂತೆ ಹುಟ್ಟಿ ಕೊಂಡಿವೆಯಲ್ಲದೇ, ಬಹಳವಾಗಿ ವ್ಯಾಪಾರಿ ದೃಷ್ಟಿಕೋನದಿಂದ ಪ್ರೇರಿತವಾಗಿವೆ. ಆದ್ದರಿಂದ ಈ ವಿಶಿಷ್ಟ ಉದ್ದೇಶದ ಉತ್ಸವಗಳು ವಿಶಿಷ್ಟವಾದ ಜನಸಮೂಹಕ್ಕೆ ಸೀಮಿತವಾಗಿದ್ದು, ಜನಸಾಮಾನ್ಯರ ಜೀವನದಲ್ಲಿ ಹೆಚ್ಚಿನ ಮಹತ್ವ ಪಡೆದಿರುವುದಿಲ್ಲ.

ಭಾರತದಲ್ಲಿ ವಿಭಿನ್ನ ಧರ್ಮದ ಜನರು ಹಲವಾರು ಸಾಂಪ್ರದಾಯಿಕ ಹಬ್ಬಗಳನ್ನು ಆಚರಿಸುತ್ತಾರೆ. ಈ ಹಬ್ಬಗಳಿಗೆ ಪೌರಾಣಿಕ ಹಿನ್ನೆಲೆಯಿದೆ... ಉದಾ: ದೀಪಾವಳಿ.. ಯುಗಾದಿ... ಇತ್ಯಾದಿ. ಇದಲ್ಲದೆ ಕ್ರಿಸ್‌ಮಸ್, ಗುಡ್ ಫ್ರೈಡೇ, ಬುದ್ಧ ಪೂರ್ಣಿಮಾ, ಗುರುನಾನಕ್ ಜಯಂತಿ... ಇತ್ಯಾದಿಯಾಗಿ ಅಸಂಖ್ಯಾತ ಹಬ್ಬಗಳಿವೆ. ಕೆಲವು ವಿಶೇಷ ಅಮಾವಾಸ್ಯೆ ಮತ್ತು ಹುಣ್ಣಿಮೆಗಳನ್ನು ಹಬ್ಬಗಳಾಗಿ ಆಚರಿಸುವುದುಂಟು.

ಹೀಗೆ ಹಬ್ಬಗಳ ಪರಂಪರೆ ಮತ್ತು ಇತಿಹಾಸವು ಸೃಷ್ಟಿ ಆರಂಭವಾದಾಗಿನಿಂದಲೇ ದೊರೆಯುತ್ತದೆ. ಆಯಾ ಕಾಲದಲ್ಲಿ, ಆಯಾ ಜನಾಂಗಕ್ಕೆ, ಆಯಾ ಪ್ರದೇಶಗಳಲ್ಲಿ ವಿಶಿಷ್ಟವಾದ ಹಬ್ಬಗಳಿವೆ. ಪ್ರತಿಯೊಂದು ಜನಾಂಗ ಅಥವಾ ಸಮುದಾಯದ ಹಬ್ಬಗಳು ಅದರ ಸಂಸ್ಕೃತಿ, ಇತಿಹಾಸ ಹಾಗೂ ಪರಂಪರೆಯನ್ನು ಬಿಂಬಿಸುತ್ತವೆ. ಕೆಲವು ಹಬ್ಬಗಳು

ವ್ಯಕ್ತಿಪೂಜೆಗಳಾದರೆ, ಕೆಲವು ಆಯಾ ಧರ್ಮದ ಐತಿಹಾಸಿಕ ಘಟನೆಗಳನ್ನು ಸ್ಮರಿಸುತ್ತವೆ. ಇನ್ನು ಕೆಲವು ಹಬ್ಬಗಳು ದೇವರ ಕೋಪ ತಾಪಗಳನ್ನು ತಣಿಸಲಿಕ್ಕಾಗಿರುತ್ತವೆ. ಹಬ್ಬಗಳು ಹಲವು ಬಗೆಯದಾದರೂ ವ್ಯಕ್ತಿಯ ಮನಸ್ಸಿಗೆ ಉಲ್ಲಾಸವನ್ನು ಕೊಡುವುದು ನಿಸ್ಸಂಶಯ. ಹಬ್ಬಗಳ ಆಚರಣಾ ವಿಧಿಗಳು ಆಯಾ ಧರ್ಮದ ತಿರುಳು ಹಾಗೂ ಸ್ಫೂರ್ತಿಯನ್ನು ಬಿಂಬಿಸುತ್ತವೆ.

ಆದರೆ ಮುಸ್ಲಿಮರ ಹಬ್ಬಗಳಿಗೆ ಅವುಗಳದೇ ಆದ ವೈಶಿಷ್ಟ್ಯವಿದೆ. ಮುಸ್ಲಿಮರ ಹಬ್ಬಗಳು ಕೇವಲ ಭೋಜನ, ಮನರಂಜನೆಗಾಗಿರದೆ, ಆತ್ಮಾವಲೋಕನದ ಸಂದರ್ಭಗಳಾಗಿವೆ. ಶ್ರೀಮಂತರು ಬಡವರಿಗೆ ಕಡ್ಡಾಯವಾಗಿ ನೆರವಾಗುವ, ತನ್ಮೂಲಕ ಸಮಾಜದ ಸರ್ವವರ್ಗಗಳಲ್ಲೂ ಸಂತೋಷವನ್ನು ಹರಡುವ ದಿನಗಳಾಗಿವೆ. ಅತ್ಯಂತ ಮುಖ್ಯವಾಗಿ ಸೃಷ್ಟಿಕರ್ತನಾದ ಅಲ್ಲಾಹನನ್ನು ಸಾಮೂಹಿಕವಾಗಿ ಸ್ತುತಿಸಿ, ಆತನ ಅಪಾರ ಅನುಗ್ರಹಗಳಿಗೆ ಕೃತಜ್ಞತೆಯನ್ನು ಸಲ್ಲಿಸುವುದಾಗಿದೆ.

ಮುಸ್ಲಿಮರ ಹಬ್ಬಗಳು ತಿಂದುಂಡು-ಮೆರೆದಾಡಿ, ಲೌಕಿಕ ಸುಖದ ಪರಾಕಾಷ್ಠೆಯನ್ನು ತಲುಪುವುದನ್ನು ಕಲಿಸದೆ, ತನ್ನಲ್ಲಿದ್ದುದನ್ನು ಇತರರಿಗೂ ಹಂಚಿ, ಸರ್ವರೂ ಸೇರಿ ಅಲ್ಲಾಹನನ್ನು ಸ್ತುತಿಸುವುದನ್ನು ಕಲಿಸುತ್ತವೆ.

ಮುಸ್ಲಿಮ್ ಹಬ್ಬಗಳಲ್ಲಿ ವ್ಯಕ್ತಿಪೂಜೆಯ ಲವಲೇಶವೂ ಕಾಣುವುದಿಲ್ಲ. ಧಾರ್ಮಿಕ ನೆಲೆಯಲ್ಲಿ ಆಚರಿಸಲು ಆದೇಶಿಸಲಾಗಿರುವ ಹಬ್ಬಗಳ ಸಂಖ್ಯೆ ಎರಡೇ, 'ಈದುಲ್ ಫಿತ್ರ್'(ರಮಝಾನ್ ಹಬ್ಬ) ಮತ್ತು 'ಈದುಲ್ ಅಝ್‌ಹಾ'(ಬಕ್ರೀದ್). ಆದರೆ ಸ್ಥಳೀಯ ವಿಭಿನ್ನ ಸಂಸ್ಕೃತಿಗಳಿಂದ ಪ್ರಭಾವಿತರಾದ ಭಾರತದ ಮುಸ್ಲಿಮರು ಇವುಗಳೊಟ್ಟಿಗೆ ಇನ್ನೂ ಕೆಲವು ಹಬ್ಬಗಳನ್ನು ಆಚರಿಸುತ್ತಾರೆ, ಉದಾ: ಮುಹರ್ರಮ್, ಮಿಲಾದುನ್ನಬಿ, ಶಬೆ ಮೆಅ್‌ರಾಜ್... ಇತ್ಯಾದಿ. ಈ ಹಬ್ಬಗಳ ಆಚರಣೆಗೆ ಧಾರ್ಮಿಕ ನೆಲೆಗಟ್ಟಿನಲ್ಲಿ (ಕುರ್‌ಆನ್ ಮತ್ತು ಪ್ರವಾದಿ ವಚನಗಳ ಆಧಾರದಲ್ಲಿ) ಯಾವುದೇ ಸ್ಥಾನವಿಲ್ಲ. ಆದರೆ ಸ್ಥಳೀಯ ಮುಸ್ಲಿಮರು ವಿಭಿನ್ನ ಸಂಸ್ಕೃತಿಗಳಿಂದ ಪ್ರಭಾವಿತರಾಗಿ ಇವುಗಳನ್ನು ಆಚರಿಸುವುದರಿಂದ ಇವುಗಳ ಕುರಿತು ವಾಸ್ತವಿಕವಾದ ಅಧ್ಯಯನ ಅವಶ್ಯಕವೆನಿಸುತ್ತದೆ.

ಇತ್ತೀಚೆಗಿನ ದಿನಗಳಲ್ಲಿ ಹಬ್ಬಗಳು ಸಮೀಪಿಸಿದರೆ ಸಾಕು, ನಗರದ ಆಯಕಟ್ಟಿನ ಸ್ಥಳಗಳಲ್ಲಿ ಪೊಲೀಸ್ ತುಕಡಿಗಳನ್ನು ನೇಮಿಸಿರುವುದನ್ನು ಕಾಣಬಹುದು. ಹಬ್ಬದ ಸಂದರ್ಭದಲ್ಲಿ ಸಂಭವಿಸುವ ಗಲಾಟೆಗಳು, ಹಬ್ಬಕ್ಕೆ ಸಂಬಂಧಿಸಿದ ಮೆರವಣಿಗೆಗಳ ಸಮಯದಲ್ಲೇ ಹೆಚ್ಚಾಗಿ ಜರಗುವುದು ಗಮನಾರ್ಹ. ಉದಾ: ಮಿಲಾದುನ್ನಬಿ ಮೆರವಣಿಗೆ, ಗಣೇಶ ಚತುರ್ಥಿ ಮೆರವಣಿಗೆ... ಇತ್ಯಾದಿ. ಆಯಾ ಸಮುದಾಯದ ಜನರು ಮೆರವಣಿಗೆಗಳನ್ನು ತಮ್ಮ ಶಕ್ತಿ ಪ್ರದರ್ಶನಕ್ಕಾಗಿ ಬಳಸಿಕೊಳ್ಳುವುದೂ ಇದಕ್ಕೆ ಕಾರಣವಿರಬಹುದು.

ರಾಷ್ಟ್ರೀಯ ಹಬ್ಬಗಳ ಸಮಯದಲ್ಲೂ ಅಷ್ಟೇ. ಧ್ವಜಾರೋಹಣ ನಡೆಸಬೇಕಾದ ಸ್ಥಳಗಳು ಸಾರ್ವಜನಿಕ ಸ್ವತ್ತೇ ಅಥವಾ ಖಾಸಗಿಯೇ ಎಂಬಿತ್ಯಾದಿ ವಿವಾದಗಳು ದಿನಕ್ಕೊಂದು ನಗರದಲ್ಲಿ ಹುಟ್ಟಿಕೊಳ್ಳುತ್ತಿರುವುದು ದುರದೃಷ್ಟಕರ.

ಹಬ್ಬಗಳನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಲು ಹಲವು ದಾರಿಗಳಿವೆ. ಪರಸ್ಪರರ ಧರ್ಮಗಳನ್ನು ಅರಿಯಲು ಹಬ್ಬಗಳು ಒಳ್ಳೆಯ ಅವಕಾಶವನ್ನು ನೀಡುತ್ತವೆ. ಹಬ್ಬದ ಸಂದರ್ಭದಲ್ಲಿ ಹಳೆಯ ದ್ವೇಷವನ್ನು ಮರೆತು ಹೃದಯಗಳು ಬೆಸೆದುಕೊಳ್ಳುತ್ತವೆ. ಹಬ್ಬಗಳು ಪರಸ್ಪರರ ಭಾವನೆಗಳಿಗೆ ಸ್ಪಂದಿಸುವ ಸದವಕಾಶವನ್ನು ನೀಡುತ್ತವೆ ಹಾಗೂ ಹಬ್ಬಗಳಲ್ಲಿ ಕೋಮು ಸೌಹಾರ್ದದ ವಾತಾವರಣ ಮೂಡಿ ಬರುತ್ತದೆ.

ಹಬ್ಬಗಳು, ವರ್ತಮಾನದ ಭೀಕರತೆ ಹಾಗೂ ಭವಿಷ್ಯದ ಅನಿಶ್ಚಿತತೆಯ ನಡುವೆ ಡೋಲಾಯಮಾನವಾಗಿ ಓಲಾಡುವ ಮನಸ್ಸುಗಳಿಗೆ ತಂಪನ್ನೆರೆಯುತ್ತವೆ.

❒ ❒ ❒

ಮುಹರ್ರಮ್

'ಮುಹರ್ರಮ್' ತಿಂಗಳು ಇಸ್ಲಾಮಿ ಕ್ಯಾಲೆಂಡರ್‌ನ ಪ್ರಥಮ ತಿಂಗಳು. ಈ ತಿಂಗಳ 1ರಿಂದ 10ನೆಯ ತಾರೀಕಿನವರೆಗೆ ಈ ಹಬ್ಬವನ್ನು ಆಚರಿಸುವುದು ಕಂಡು ಬರುತ್ತದೆ.

ಹಿಜರಿ ಶಕೆ 40ರಲ್ಲಿ ಹ.ಹಸನ್‌ರ(ರ) ಬಳಿಕ ಹ.ಮುಆವಿಯಾ ಎಂಬವರು 'ಖಲೀಫಾ' ಆದರು. (ಪ್ರಜಾಪ್ರಭುತ್ವ ವಿಧಾನದಿಂದ ಚುನಾಯಿಸಲ್ಪಟ್ಟ ಇಸ್ಲಾಮಿ ಆಡಳಿತಗಾರ) ತಮ್ಮ ನಂತರ ಹ.ಮುಆವಿಯಾರವರು ತಮ್ಮ ಮಗ 'ಯಝೀದ್'ನನ್ನು ಉತ್ತರಾಧಿಕಾರಿಯನ್ನಾಗಿಸಲು ಬಯಸಿದರು. ವಂಶಾಡಳಿತ ಹೇರಲು ಪ್ರಯತ್ನಿಸುತ್ತಿರುವ ಕಾರಣಕ್ಕಾಗಿ ಹ. ಇಮಾಮ್ ಹುಸೈನ್(ರ) ಆದಿಯಾಗಿ ಹಲವರು ಇದನ್ನು ವಿರೋಧಿಸಿದರು. ಆದರೆ ಹ.ಮುಆವಿಯಾ(ರ) ನಿಧನರಾದಾಗ 'ಯಝೀದ್' ಪಟ್ಟವನ್ನೇರಿದನು. 'ಯಝೀದ್' ಒಬ್ಬ ಅಕ್ರಮಿ ಹಾಗೂ ದುಷ್ಟ ಆಡಳಿತಗಾರನಾಗಿದ್ದನು. ಈತನ ದಬ್ಬಾಳಿಕೆಯಿಂದ ಬೇಸತ್ತ 'ಕೂಫಾ' ಎಂಬ ಪ್ರದೇಶದ ಜನರು ಹ. ಇಮಾಮ್ ಹುಸೈನ್‌ರನ್ನು(ರ) ತಮ್ಮ ಆಡಳಿತಗಾರನನ್ನಾಗಿ ನೇಮಿಸಲು ತೀರ್ಮಾನಿಸಿ ಅವರಿಗೆ ಆಹ್ವಾನವಿತ್ತರು. ಅಲ್ಲಿ ನಡೆಯುತ್ತಿದ್ದ ಅನ್ಯಾಯ, ಅತ್ಯಾಚಾರ, ಮರ್ದನಗಳ ಅರಿವಿದ್ದ ಹ.ಇಮಾಮ್ ಹುಸೈನ್(ರ) ಇಸ್ಲಾಮಿ ಸಂವಿಧಾನದ ಅನ್ವಯ ಉತ್ತಮ ಆಡಳಿತವನ್ನು ನೀಡುವ ಸದವಕಾಶವನ್ನು ಗುರುತಿಸಿದರು. ಅವರ ಆಹ್ವಾನವನ್ನು ಮನ್ನಿಸಿ ಹ.ಇಮಾಮ್ ಹುಸೈನ್(ರ) 'ಕೂಫಾ'ದೆಡೆಗೆ ತನ್ನ ಪರಿವಾರದ ಸಮೇತ ಹೊರಟರು. ಇದರ ಸುಳಿವು 'ಯಝೀದ್'ನಿಗೆ ದೊರಕಿತು. ಹಿಜರಿ ಶಕೆ 61ನೆಯ ವರ್ಷದಲ್ಲಿ 'ಇರಾಕ್' ದೇಶದ 'ಕರ್ಬಲಾ' ಎಂಬ ಪ್ರದೇಶದಲ್ಲಿ, ಹ.ಇಮಾಮ್ ಹುಸೈನ್(ರ) ಮತ್ತು ಅವರ ಪರಿವಾರವನ್ನು ಮುತ್ತಿಗೆ ಹಾಕಿದ ಯಝೀದ್‌ನ ಭಾರೀ ಸೈನ್ಯವು ಅವರ ಅನ್ನಾಹಾರಗಳನ್ನು ತಡೆಯಿತು. ಅತೀವ ಕಷ್ಟನಷ್ಟವನ್ನು ಅನುಭವಿಸಿದ ಹ.ಇಮಾಮ್ ಹುಸೈನ್(ರ) ಮತ್ತು ಅವರ ಪರಿವಾರದ ಸ್ತ್ರೀ-ಪುರುಷರೆಲ್ಲರೂ ವೀರಾವೇಶದಿಂದ

ಹೋರಾಡಿ ವೀರಮರಣವನ್ನು ಹೊಂದಿದರು. ಅವರ ಕುಟುಂಬದ ಹಸುಗೂಸುಗಳ ಮರಣದ ವಿವರಣೆಗಳು ಹೃದಯವಿದ್ರಾವಕವಾಗಿವೆ.

ಮೇಲ್ನೋಟಕ್ಕೆ ಈ ಹುತಾತ್ಮತೆಯು ಅಕ್ರಮಿ ಆಡಳಿತಗಾರನ ವಿರುದ್ಧದ ಬಂಡಾಯ ವೆಂದೆನಿಸುತ್ತದೆ. ಆದರೆ ಹ. ಇಮಾಮ್ ಹುಸೈನ್(ರ) ಇದರ ದೂರಗಾಮಿ ಪರಿಣಾಮಗಳನ್ನು ಅರಿತಿದ್ದರು. ಇಸ್ಲಾಮಿ ಸಂವಿಧಾನದ ಮೂಲಭೂತ ತತ್ವಗಳಿಗುಂಟಾದ ಧಕ್ಕೆಯನ್ನು ಗ್ರಹಿಸಿದ್ದರು. ಅವುಗಳಾವುವೆಂದರೆ, ಮೊಟ್ಟ ಮೊದಲನೆಯದಾಗಿ 'ಸ್ವತಂತ್ರ ಚುನಾವಣೆ'ಯನ್ನು ಕೈ ಬಿಡಲಾಗಿತ್ತು. ಯಾವುದೇ ವ್ಯಕ್ತಿ ಸ್ವಇಚ್ಛೆಯಿಂದ ಅಧಿಕಾರ ಗಳಿಸಲು ಪ್ರಯತ್ನಿಸಬಾರದು. ಜನರು ಸಮಾಲೋಚನೆಯ ಮೂಲಕ ಉತ್ತಮ ವ್ಯಕ್ತಿಯನ್ನು ಆರಿಸಿ ಅವನಿಗೆ ಅಧಿಕಾರ ನೀಡಬೇಕಾಗಿತ್ತು. ಆದರೆ ಇಲ್ಲಿ ವಂಶಾಡಳಿತವನ್ನು ಹೇರುತ್ತ ಅಯೋಗ್ಯ ವ್ಯಕ್ತಿಯೊಬ್ಬನಿಗೆ ಪಟ್ಟಾಭಿಷೇಕ ಮಾಡಲಾಗಿತ್ತು.

ಎರಡನೆಯದಾಗಿ 'ಸಮಾಲೋಚನಾ ವ್ಯವಸ್ಥೆ' ಕುಸಿದು ಬಿದ್ದಿತ್ತು. ಆಡಳಿತಗಾರನಿಗೆ ಸೂಕ್ತ ಸಲಹೆ ನೀಡಲು ಸತ್ಯಸಂಧರು, ಜ್ಞಾನಿಗಳು ಹಾಗೂ ಸಮರ್ಥರಾದವರನ್ನು ಆಯ್ದು ಸಮಿತಿಯೊಂದನ್ನು ನೇಮಿಸಲಾಗುತ್ತಿತ್ತು (ಮಜ್ಲಿಸೆ ಶೂರಾ). ಆದರೆ ಇದರ ಬದಲಿಗೆ ಹೊಗಳು ಭಟ್ಟರು ಮತ್ತು ಕಪಟಿಗಳನ್ನು ಈ ಸಮಿತಿಗೆ ಸೇರಿಸಿ ನಿರಂಕುಶ ಆಡಳಿತ ಜಾರಿಗೊಳಿಸಲಾಯಿತು.

ಮೂರನೆಯದಾಗಿ 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ದಮನವಾಗಿತ್ತು. ಜನರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಸೃಜನಾತ್ಮಕವಾಗಿ ಟೀಕಿಸುವ ಹಕ್ಕಿತ್ತು. ಆದರೆ ಇಲ್ಲಿ ಟೀಕಿಸುವವರನ್ನು ದಮನಿಸಲಾಯಿತು. ಹೀಗೆ ಸತ್ಯದ ಕತ್ತನ್ನು ಹಿಸುಕಿ ಹೊಗಳುಭಟ್ಟರನ್ನು ಪ್ರಶಂಸಿಸಲಾಯಿತು.

ನಾಲ್ಕನೆಯದಾಗಿ 'ಹೊಣೆಗಾರಿಕೆಯ ಪ್ರಜ್ಞೆ' ಕುಂಠಿತವಾಗಿತ್ತು. ಆಡಳಿತಗಾರರು ದೇವನ ಮುಂದೆ ವಿಚಾರಣೆ ನೀಡಬೇಕಿದೆ ಎಂಬ ಹೊಣೆಗಾರಿಕೆಯ ಪ್ರಜ್ಞೆಯ ಬದಲಿಗೆ ಸ್ವಾರ್ಥ ತುಂಬಿ ತುಳುಕಿತು. ಆಡಳಿತಗಾರರು ತಮ್ಮನ್ನು ಪ್ರಶ್ನಾತೀತರು ಎಂದು ಭಾವಿಸಲಾರಂಭಿಸಿದರು.

ಐದನೆಯದಾಗಿ 'ಬೈತುಲ್ ಮಾಲ್(ಸಾರ್ವಜನಿಕ ಬೊಕ್ಕಸ)'ನ ಜವಾಬ್ದಾರಿ ಹೊರಟು ಹೋಗಿತ್ತು. ಅಲ್ಲಾಹನ ಸೊತ್ತು ಹಾಗೂ ಮುಸ್ಲಿಮರ ವಿಶ್ವಸ್ಥ ನಿಧಿಯಾದ 'ಬೈತುಲ್ ಮಾಲ್'ನಲ್ಲಿ ಹಣ ಸೇರಬೇಕಾದರೂ ಧರ್ಮಸಮ್ಮತ ಮಾರ್ಗದಿಂದಲೇ ಸೇರಬೇಕಿತ್ತು. ಹಣ ತೆಗೆಯಬೇಕಾದರೂ ಧರ್ಮಸಮ್ಮತ ಕಾರ್ಯಕ್ಕಾಗಿರಬೇಕಿತ್ತು. ಅದು ಜನರ ಸೊತ್ತಾಗಿತ್ತೇ ಹೊರತು ಆಡಳಿತಗಾರನ ಸ್ವಂತ ಸೊತ್ತಾಗಿರಲಿಲ್ಲ. ಆದರೆ ಹೀಗೆ ಅತ್ಯಂತ ಪಾರದರ್ಶಕ ಲೆಕ್ಕಪತ್ರ ನೀಡುವ ಬದಲು ಆಡಳಿತಗಾರರು ಹಾಗೂ ಅಧಿಕಾರಿಗಳು ಬೇಕಾಬಿಟ್ಟಿ ಹಣ ಕಬಳಿಸಲು ಪ್ರಾರಂಭಿಸಿದರು.

ಆರನೆಯದಾಗಿ, 'ಕಾನೂನಿನ ಆಳ್ವಿಕೆ' ಕೊನೆಗೊಂಡಿತ್ತು. ಮೊದಲು ಅಲ್ಲಾಹ್ ಮತ್ತು ಪ್ರವಾದಿಯವರ(ಸ) ಕಾನೂನಾದ 'ಶರೀಅತ್'ನ ಆಳ್ವಿಕೆ ಇತ್ತು. ಯಾರೂ

ಕಾನೂನಿಗೆ ಅತೀತರಾಗಿರಲಿಲ್ಲ. ಆದರೆ ಈಗ ದುರ್ಬಲರು ಮತ್ತು ಬಡವರಿಗೆ ಕಾನೂನು ಅನ್ವಯವಾದರೆ, ಸಿರಿವಂತರು ಮತ್ತು ಬಲಾಢ್ಯರು ಕಾನೂನಿಗೆ ಹೊರತಾದರು.

ಏಳನೆಯದಾಗಿ, 'ಸಂಪೂರ್ಣ ಸಮಾನತೆ' ಕೊನೆಗೊಂಡಿತು. ಮುಸ್ಲಿಮರಲ್ಲಿ ಒಬ್ಬರ ಮೇಲೆ ಇನ್ನೊಬ್ಬರಿಗೆ ಮೇಲ್ಮೆಯಿದ್ದಲ್ಲಿ ಅದು ಕೇವಲ ಚಾರಿತ್ರ್ಯ, ಅರ್ಹತೆ ಮತ್ತು ಸೇವೆಯ ಆಧಾರದಲ್ಲಿತ್ತು. ಆದರೆ ಅದಕ್ಕೆ ಬದಲಾಗಿ ಆಡಳಿತಗಾರ ಹಾಗೂ ಅಧಿಕಾರಿಗಳ ಕುಟುಂಬದವರಿಗೆ ಉನ್ನತ ಸ್ಥಾನ ಮತ್ತು ಇತರರಿಗೆ ಕನಿಷ್ಠ ಸ್ಥಾನ ದೊರಕಲಾರಂಭಿಸಿತು. ತನ್ಮೂಲಕ ಪಕ್ಷಪಾತ ವ್ಯಾಪಕಗೊಂಡಿತು.

ಇಸ್ಲಾಮಿ ಸಂವಿಧಾನದ ಮೂಲ ತತ್ವಗಳಿಗೆ ಕುಂದುಂಟಾದುದನ್ನು ಗ್ರಹಿಸಿದ ಹ. ಇಮಾಮ್ ಹುಸೈನರು(ರ) ಒಳಿತಿನ ಸಂಸ್ಥಾಪನೆ ಮತ್ತು ಕೆಡುಕಿನ ನಿರ್ಮೂಲನೆಯ ತಮ್ಮ ಕರ್ತವ್ಯದಿಂದ ಹಿಂಜರಿಯದೇ ಅದಕ್ಕಾಗಿ ಹೋರಾಡಿ ಹುತಾತ್ಮರಾದರು.

ಸಮಾಜದ ಅನ್ಯಾಯ, ಅಕ್ರಮಗಳನ್ನು ನೋಡುತ್ತ ಮೂಕ ಸಾಕ್ಷಿಗಳಾಗಿರುವ ಜನರಿಗೆ ಹ. ಇಮಾಮ್ ಹುಸೈನರ(ರ) ಜೀವನ ಚರಿತ್ರೆಯಲ್ಲಿ ಬಹು ದೊಡ್ಡ ಪಾಠವಿದೆ. ಇದು ಹ. ಇಮಾಮ್ ಹುಸೈನರ(ರ) ಹುತಾತ್ಮತೆಯ ಐತಿಹಾಸಿಕ ಹಿನ್ನೆಲೆ.

ಶಿಯಾ ಪಂಗಡದವರು ಈ ಹಬ್ಬವನ್ನು ಭಿನ್ನವಾಗಿ ಆಚರಿಸುತ್ತಾರೆ. ಶೋಕ ಸಂಕೇತವಾಗಿ ಮುಹರ್ರಮ್ ತಿಂಗಳಾರಂಭದಿಂದ ಕಪ್ಪು ಬಟ್ಟೆಗಳನ್ನು ಧರಿಸುತ್ತಾರೆ. ಪ್ರತಿದಿನವು ಮಜ್‌ಲಿಸ್(ಸಭೆ)ಗಳನ್ನು ಏರ್ಪಡಿಸಿ ವಿದ್ವಾಂಸರು ಹ. ಇಮಾಮ್ ಹುಸೈನ್(ರ) ಹಾಗೂ ಅವರ ಜೊತೆಗಾರರು ಹುತಾತ್ಮರಾದ ಘಟನೆಯನ್ನು ವಿವರಿಸುತ್ತಾರೆ. ಮುಹರ್ರಮ್ 10ನೆಯ ತಾರೀಕಿನಂದು ದೊಡ್ಡದೊಡ್ಡ ಮೆರವಣಿಗೆಗಳನ್ನು ಸಂಘಟಿಸಲಾಗುತ್ತದೆ ಹಾಗೂ ಹ.ಇಮಾಮ್ ಹುಸೈನರ(ರ) ಸಮಾಧಿಯ ಮಾಡೆಲ್‌ಗಳನ್ನು ಹಾಗೂ ಬ್ಯಾನರ್‌ಗಳನ್ನು ಪ್ರದರ್ಶಿಸುತ್ತ ಮೆರವಣಿಗೆಕಾರರು ನಡೆಯುತ್ತಾರೆ. ದುಃಖ ಹಾಗೂ ಶೋಕ ಸೂಚಕವಾಗಿ ಹರಿತವಾದ ಬ್ಲೇಡ್, ಚಿಕ್ಕ ಕತ್ತಿ ಇತ್ಯಾದಿಗಳಿಂದ ತಮ್ಮ ಬೆನ್ನು ಹಾಗೂ ಎದೆಗಳ ಮೇಲೆ ಗಾಯ ಮಾಡಿಕೊಳ್ಳುತ್ತಾ ಸಾಗುತ್ತಾರೆ. ಹುತಾತ್ಮರು ಅನುಭವಿಸಿದ ಕಷ್ಟವನ್ನು ತೋರಿಸಲು ಈ ರೀತಿಯಾಗಿ ರಕ್ತ ಹರಿಸಲಾಗುತ್ತದೆ. ದುಃಖದ ಸಂದರ್ಭವಾದ್ದರಿಂದ ಜೋರಾಗಿ 'ಯಾ ಹುಸೈನ್' ಎಂದು ಕೂಗುತ್ತ ಅಳುತ್ತಾ ಸಾಗುತ್ತಿರುತ್ತಾರೆ. ಸಾಮಾನ್ಯವಾಗಿ ಬಿಳಿ ಕುದುರೆಯನ್ನು ಚೆನ್ನಾಗಿ ಸಿಂಗರಿಸಿಕೊಂಡು ಮೆರವಣಿಗೆಯಲ್ಲಿ ಕೊಂಡೊಯ್ದು, ಹ. ಇಮಾಮ್ ಹುಸೈನ್(ರ) ಹುತಾತ್ಮರಾದ ನಂತರ ಅದರ ಖಾಲಿಯಾದ ಸವಾರಿಯನ್ನು ನೆನಪಿಗೆ ತರುತ್ತಾರೆ. ಈ 10 ದಿನಗಳಲ್ಲಿ ಶಿಯಾ ಪಂಗಡದವರು ಅಲ್ಲಲ್ಲಿ ನೀರು, ಹಣ್ಣಿನ ರಸ-ಇತ್ಯಾದಿಗಳನ್ನು ವಿತರಿಸುವ ವ್ಯವಸ್ಥೆ ಮಾಡುತ್ತಾರೆ.

ಇನ್ನು ಕೆಲವು ಮುಸ್ಲಿಮರು ಬೀದಿ ಬೀದಿಗಳಲ್ಲಿ 'ಅಲಮ್' (ಹ.ಇಮಾಮ್ ಹುಸೈನರ(ರ) ಸೇನೆಯ ಧ್ವಜದ ಸಾಂಕೇತಿಕ ರೂಪ) ಹಾಗೂ 'ತಾಝಿಯಾ'(ಬಂಬೂ ಮತ್ತು ಕಾಗದ ಇತ್ಯಾದಿಗಳನ್ನು ಬಳಸಿ ತಯಾರಿಸಲಾದ ಹ. ಇಮಾಮ್ ಹುಸೈನರ(ರ)

ಸಮಾಧಿ ಮಾದರಿಯ ಸಾಂಕೇತಿಕ ರೂಪ)ಗಳನ್ನು ನಿರಂತರ 10 ದಿನಗಳವರೆಗೆ ಕೂಡಿಸಿ, ಮುಹರ್ರಮ್ 10ನೆಯ ತಾರೀಕಿನಂದು ಭಾರೀ ಮೆರವಣಿಗೆಯನ್ನು ನಡೆಸುತ್ತಾರೆ. ಈ ಸಮಯದಲ್ಲಿ ಕೆಲವು ಪ್ರದೇಶಗಳಲ್ಲಿ ಮೆರವಣಿಗೆಯೊಂದಿಗೆ ಹುಲಿವೇಷಗಳನ್ನು ಧರಿಸಿ ಕುಣಿಯುತ್ತಾರೆ. ಅವುಗಳಿಗೆ ಹರಕೆ ಇತ್ಯಾದಿಗಳನ್ನು ಸಲ್ಲಿಸುತ್ತಾರೆ. ಮೆರವಣಿಗೆಯ ಕೊನೆಯಲ್ಲಿ ಅವುಗಳನ್ನು ಸ್ಮಶಾನಭೂಮಿಯಲ್ಲಿ ಹೂಳುತ್ತಾರೆ. ಮನೆಯಲ್ಲಿ ವಿಶಿಷ್ಟ ಬಗೆಯ ತಿಂಡಿ ಹಾಗೂ ಸಿಹಿ ತಿನಿಸುಗಳನ್ನು ತಯಾರಿಸಿ ತಿನ್ನುತ್ತಾರೆ, ಹೊಸಬಟ್ಟೆಗಳನ್ನು ಧರಿಸುತ್ತಾರೆ.

ಈ ಆಚರಣೆಗಳು ಸ್ಥಳೀಯ ಸಂಸ್ಕೃತಿಗಳಿಂದ ಪ್ರಭಾವಿತವಾಗಿರುವುದು ಸ್ಪಷ್ಟ. ಈ ಎಲ್ಲ ಆಚರಣೆಗಳನ್ನು ಮೀರಿ ಅಲ್ಲಾಹನು ಮುಹರ್ರಮ್ ತಿಂಗಳಿಗೆ ಪ್ರತ್ಯೇಕತೆ ಹಾಗೂ ಪಾವಿತ್ರ್ಯತೆಯನ್ನು ದಯಪಾಲಿಸಿದ್ದಾನೆ. ಮುಹರ್ರಮನ್ನು ಅಲ್ಲಾಹನು ಪವಿತ್ರ ತಿಂಗಳನ್ನಾಗಿ ನಿಶ್ಚಯಿಸಿದುದಲ್ಲದೇ ಅದರ ಪ್ರಥಮ ಹತ್ತು ದಿನಗಳಂತೂ ಅತ್ಯಂತ ಅನುಗ್ರಹೀತವಾಗಿವೆ ಹಾಗೂ ಆರಾಧನಾ ದೃಷ್ಟಿಯಿಂದ ಅಲ್ಲಾಹನ ಸಂಪ್ರೀತಿಗೆ ಪಾತ್ರವಾದವುಗಳಾಗಿವೆ ಎಂದು ಪ್ರವಾದಿ(ಸ) ಹೇಳಿದ್ದಾರೆ.

ಆ ದಿನವನ್ನು 'ಯೌಮುಲ್ ಆಶೂರಾ' ಎಂದು ಕರೆಯಲಾಗುತ್ತದೆ. 'ಆಶೂರಾ' ಎಂಬ ಪದವು 'ಅಶರ'ದಿಂದ ಹೊರಟಿದೆ. 'ಅಶರ' ಎಂದರೆ 10 ಎಂದರ್ಥ. ಆದ್ದರಿಂದ ಮುಹರ್ರಮ್ 10ನೆಯ ತಾರೀಕನ್ನು 'ಯೌಮುಲ್ ಆಶೂರಾ' ಎಂದು ಕರೆಯಲಾಗುತ್ತದೆ. ಆ ದಿನಕ್ಕೆ ನೀಡಲಾಗಿರುವ ಮಹತ್ವವು ಹ. ಇಮಾಮ್ ಹುಸೈನ್(ರ) ಹುತಾತ್ಮ ರಾದುದಕ್ಕಾಗಿ ಅಲ್ಲ. ಅದರ ಇತಿಹಾಸವು ತುಂಬಾ ಪುರಾತನವಾಗಿದೆ. ಹ. ಆದಮ್‌ರನ್ನು(ಅ) ಸೃಷ್ಟಿಸಲಾಗಿದ್ದು, ಹ. ಆದಮ್‌ರು(ಅ) ಸ್ವರ್ಗವನ್ನು ಪ್ರವೇಶಿಸಿದ್ದು, ಹ. ಇಬ್ರಾಹೀಮ್(ಅ) ಹುಟ್ಟಿದ್ದು, ಹ. ಇಬ್ರಾಹೀಮ್‌ರನ್ನು (ಅ) ಅಗ್ನಿಕುಂಡಕ್ಕೆ ಎಸೆದದ್ದು, ನಂತರ ಅಗ್ನಿಯು ಅವರ ಪಾಲಿಗೆ ತಣ್ಣಗಾದ ದಿನ. ಹ. ಈಸಾರನ್ನು(ಅ) ಸ್ವರ್ಗಕ್ಕೆ ಎತ್ತಿಕೊಳ್ಳಲಾದ ದಿನ ಹಾಗೂ ಹ. ಮೂಸಾರನ್ನು(ಅ) ಮತ್ತು ಬನೀ ಇಸ್ರಾಈಲರನ್ನು ಫಿರ್‌ಔನನ ಕಿರುಕುಳ ದಿಂದ ಅಲ್ಲಾಹನು ಪಾರುಗೊಳಿಸಿದ ದಿನ.

ಹ. ಇಬ್ನು ಅಬ್ಬಾಸ್‌ರು(ರ) ವರದಿ ಮಾಡಿರುವಂತೆ, ಪ್ರವಾದಿ ಮುಹಮ್ಮದ್(ಸ), ಮದೀನಾಕ್ಕೆ ಬಂದಾಗ ಯಹೂದಿಗಳು 'ಆಶೂರಾ' ದಿನದಂದು ಉಪವಾಸ ಆಚರಿಸು ತ್ತಿದ್ದರು. ಏತಕ್ಕಾಗಿ ಅವರು ಉಪವಾಸ ಆಚರಿಸುತ್ತಿದ್ದಾರೆ ಎಂದು ಪ್ರವಾದಿಯವರು(ಸ) ಕೇಳಿದಾಗ, ಅಂದು ಪ್ರವಾದಿ ಮೂಸಾ(ಅ) ಹಾಗೂ ಅವರ ಸಂಗಾತಿಗಳನ್ನು ಅಲ್ಲಾಹನು, ಫಿರ್‌ಔನನ ಕಿರುಕುಳದಿಂದ ಪಾರುಗೊಳಿಸಿದುದರ ಕೃತಜ್ಞತೆಯ ರೂಪದಲ್ಲಿ ಪ್ರವಾದಿ ಮೂಸಾರವರು(ಅ) ಉಪವಾಸವನ್ನು ಆಚರಿಸಿದ್ದರು ಎಂದು ತಿಳಿಸಿದಾಗ, ಪ್ರವಾದಿ ಮುಹಮ್ಮದರು(ಸ), ಮೂಸಾರವರ(ಅ) ಮೇಲೆ ಅವರಿಗಿಂತ ಹೆಚ್ಚು ಹಕ್ಕುಳ್ಳವರು ನಾವಾಗಿದ್ದೇವೆ ಎಂದು ಹೇಳಿ ಸ್ವಯಂ ತಾನು ಉಪವಾಸವಿದ್ದುದಲ್ಲದೇ ತಮ್ಮ ಸಮುದಾಯಕ್ಕೆ ಅದನ್ನು ಆಚರಿಸಲು ಆದೇಶಿಸಿದರು. ತರುವಾಯ ಅದೇ ದಿನ

ಉಪವಾಸವಿರುವ ಯಹೂದಿಗಳ ಸಾಮ್ಯತೆಯನ್ನು ತಪ್ಪಿಸಲಿಕ್ಕಾಗಿ ಎರಡು ದಿನಗಳ ಅರ್ಥಾತ್ ಮುಹರ್ರಮ್ 9,10ರಂದು ಉಪವಾಸವಿರುವಂತೆ ಅನುಯಾಯಿಗಳಿಗೆ ಆದೇಶಿಸಿದರು. ಆದ್ದರಿಂದ ವಿದ್ವಾಂಸರ ಅಭಿಪ್ರಾಯದಲ್ಲಿ 3 ವಿಧದಲ್ಲಿ ಈ ಉಪವಾಸವನ್ನು ಆಚರಿಸಬಹುದು. ಮೊದಲನೆಯದಾಗಿ ಮುಹರ್ರಮ್ 9 ಮತ್ತು 10ರಂದು, ಎರಡನೆಯದಾಗಿ ಮುಹರ್ರಮ್ 10, 11ರಂದು ಮತ್ತು ಮೂರನೆಯದಾಗಿ ಮುಹರ್ರಮ್ 10ರಂದು.

ಪ್ರವಾದಿಯವರು(ಸ) ಈ ದಿನದ ಉಪವಾಸದ ಮಹತ್ವದ ಕುರಿತು, "ಆಶೂರಾ ದ್ದಿನದ ಉಪವಾಸವು ಗತ ವರ್ಷದ ಪಾಪಗಳಿಗೆ ಪ್ರಾಯಶ್ಚಿತ್ತವಾಗಿದೆ" ಎಂದು ಹೇಳಿರುವರು. (ಮುಸ್ಲಿಮ್)

ಹೀಗೆ ಈ ಐತಿಹಾಸಿಕ ದಿನದ ಆಚರಣೆಯು ಉಪವಾಸದ ರೂಪದಲ್ಲಾಗಬೇಕು ಎಂದು ಪ್ರವಾದಿ ಚರ್ಯೆಯಿಂದ ಸಾಬೀತಾಗುತ್ತದೆ.

ಇನ್ನು ಕರ್ಬಲಾದ ಘಟನೆಯಿಂದ ತಿಳಿಯುವುದೇನೆಂದರೆ, ಹ.ಇಮಾಮ್ ಹುಸೈನ್(ರ) ಮಿಥ್ಯವನ್ನು ಸಹಿಸಿ ಸುಮ್ಮನಾಗಲಿಲ್ಲ. ಸತ್ಯಕ್ಕಾಗಿ ಸಂಘರ್ಷ ಮಾಡಿ ಹುತಾತ್ಮರಾದರು.

"ಸತ್ಯ ಬಂದು ಬಿಟ್ಟಿತು, ಮಿಥ್ಯ ಅಳಿದು ಹೋಯಿತು, ಮಿಥ್ಯವು ಅಳಿದು ಹೋಗುವಂತಹದ್ದೇ ಎಂದು ಘೋಷಿಸಿರಿ." (ಪವಿತ್ರ ಕುರ್‌ಆನ್, 17:81)

ಕುರ್‌ಆನಿನ ಈ ಸೂಕ್ತವನ್ನು ತಮ್ಮ ಜೀವನದ ಧ್ಯೇಯವನ್ನಾಗಿಸಿಕೊಂಡು, ಹುತಾತ್ಮರಾದ ಮಹಾತ್ಮರ ಪರಂಪರೆ ಇಂದಿಗೂ ಜಾರಿಯಲ್ಲಿದೆ. ಮುಹರ್ರಮ್‌ನ ಸಂದರ್ಭದಲ್ಲಿ, ಕರ್ಬಲಾದ ಘಟನೆಯು ಸತ್ಯವಿಶ್ವಾಸಿಗಳ ಮನದಲ್ಲಿ ಸತ್ಯದ ವಿಜಯಕ್ಕಾಗಿ ತನು, ಮನ, ಧನವನ್ನು ಸಮರ್ಪಿಸುವ ಪ್ರೇರಣೆ ನೀಡುತ್ತದೆ.

ಭ್ರಷ್ಟ ವ್ಯವಸ್ಥೆ ಮತ್ತು ದುಷ್ಟ ಆಡಳಿತದ ವಿರುದ್ಧ ಹೋರಾಡುವ ಮನೋಬಲವನ್ನು ವೃದ್ಧಿಸುತ್ತದೆ.

□ □ □

ಮಿಲಾದುನ್ನಬಿ

"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಯವರಿಗೆ 'ಸಲಾತ್' (ಸ್ವಸ್ತಿ ವಚನ) ಹೇಳುತ್ತಾರೆ. ಸತ್ಯವಿಶ್ವಾಸಿಗಳೇ, ನೀವೂ ಅವರ ಮೇಲೆ ಸಲಾತ್ ಮತ್ತು ಸಲಾಮ್ (ಅಭಿವಂದನೆ) ಸಲ್ಲಿಸುತ್ತಲಿರಿ." (ಪವಿತ್ರ ಕುರ್‌ಆನ್, 33:56)

ಸಾಮಾನ್ಯವಾಗಿ 'ಈದ್ ಮಿಲಾದುನ್ನಬಿ' ಎಂದರೆ ಪ್ರವಾದಿ ಮುಹಮ್ಮದರ(ಸ) ಜನ್ಮದಿನಾಚರಣೆ ಎಂದು ಅರ್ಥೈಸಲಾಗುತ್ತದೆ. ಅನೇಕ ಮುಸ್ಲಿಮರು ಇಸ್ಲಾಮಿ ಚಾಂದ್ರಮಾನ ಕ್ಯಾಲೆಂಡರ್‌ನ 'ರಬೀವುಲ್ ಅವ್ವಲ್' ತಿಂಗಳ 12ನೆಯ

ತಾರೀಕಿನಂದು ಪ್ರವಾದಿ ಮುಹಮ್ಮದರ(ಸ) ಜನ್ಮದಿನಾಚರಣೆಯನ್ನು ಆಚರಿಸುತ್ತಾರೆಂಬುದು ವಾಸ್ತವವಾಗಿದೆ.

'ಈದ್ ಮಿಲಾದುನ್ನಬಿ'ಯ ದಿನದಂದು ಬೆಳಗ್ಗಿನ ಸಮಯದಲ್ಲಿ ದೊಡ್ಡ ಮೆರವಣಿಗೆಯನ್ನು ಸಂಘಟಿಸಲಾಗುತ್ತದೆ. ಮೆರವಣಿಗೆಯ ಹಾದಿಯನ್ನು ಹಸಿರು ಕಾಗದ, ಕಮಾನು ಇತ್ಯಾದಿಗಳಿಂದ ಸಿಂಗರಿಸಲಾಗುತ್ತದೆ. ನಗರದ ಬೀದಿಬೀದಿಗಳನ್ನು ಸಾಯಂಕಾಲದ ಸಮಯದಲ್ಲಿ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗುತ್ತದೆ. ಮೆರವಣಿಗೆಕಾರರು ಪ್ರವಾದಿ ಪ್ರೇಮದ ಘೋಷಣೆಗಳನ್ನು ಕೂಗುತ್ತ ನಗರದ ಮುಖ್ಯ ಬೀದಿಗಳಲ್ಲಿ ಸಾಗುತ್ತಾರೆ. ಮಸೀದಿ ಅಥವಾ ಇನ್ನಿತರ ಕಡೆ ಸಾಯಂಕಾಲ ನಡೆಯುವ ಸಾಮೂಹಿಕ ಉಪನ್ಯಾಸಗಳಲ್ಲಿ ಧಾರ್ಮಿಕ ವಿದ್ವಾಂಸರು, ನಾಯಕರು ಪ್ರವಾದಿ ಮುಹಮ್ಮದರ(ಸ) ಜೀವನದ ಕುರಿತು ಉಪನ್ಯಾಸಗಳನ್ನು ನೀಡುತ್ತಾರೆ. ಇಂತಹ ಉಪನ್ಯಾಸಗಳಲ್ಲಿ ಅವರ ಹುಟ್ಟು, ಅನಾಥ ಬಾಲ್ಯ, ಸಾತ್ವಿಕ ಯೌವನ, ಪ್ರಬುದ್ಧ ಪರಿಪೂರ್ಣ ಜೀವನ, ಅವರ ಸನ್ನಡತೆ, ಉಪದೇಶಗಳು, ಬವಣೆಗಳು, ಶತ್ರುಗಳನ್ನೂ ಕ್ಷಮಿಸುವ ಔದಾರ್ಯ ಗುಣ, ಕಠಿಣ ವಿರೋಧಗಳ ನಡುವೆ ಸ್ಥಿರಚಿತ್ತತೆ, ಯುದ್ಧಗಳಲ್ಲಿ ಮುಂದಾಳುತ್ವ, ಜಾಣ್ಮೆ, ಸ್ತ್ರೀ ವಿಮೋಚನೆಯ ಕಳಕಳಿ, ಗುಲಾಮ ವಿಮೋಚನೆಯ ಮೇಲ್ಪಂಕ್ತಿ ಇತ್ಯಾದಿ ಗುಣಗಳನ್ನು ಸವಿಸ್ತಾರವಾಗಿ ವಿವರಿಸಿ ಅವುಗಳ ಅನುಸರಣೆಗಾಗಿ ಪ್ರೇರೇಪಿಸಲಾಗುತ್ತದೆ. ಮನೆಗಳಲ್ಲಿ ಶ್ರೇಷ್ಠ ಭಕ್ಷ್ಯ ಭೋಜನಗಳನ್ನು ಸೇವಿಸುತ್ತಾರೆ. ಹೊಸ ಬಟ್ಟೆಗಳನ್ನು ಧರಿಸಲಾಗುತ್ತದೆ.

ಬಹಳಷ್ಟು ಸಂಖ್ಯೆಯ ಮುಸ್ಲಿಮರು ಜನ್ಮದಿನಾಚರಣೆಗಳನ್ನಾಗಲೀ ಅಥವಾ ವಾರ್ಷಿಕ ಪುಣ್ಯಸ್ಮರಣೆಗಳನ್ನಾಗಲೀ ಆಚರಿಸುವುದರಲ್ಲಿ ನಂಬಿಕೆ ಇಡುವುದಿಲ್ಲ. ಏಕೆಂದರೆ ಪ್ರವಾದಿ ಮುಹಮ್ಮದರು(ಸ) ತಮ್ಮ ಜೀವಿತಾವಧಿಯಲ್ಲಿ ತಮ್ಮ ಅಥವಾ ಇನ್ನಿತರರ ಜನ್ಮ ದಿನಾಚರಣೆಯನ್ನು ಆಚರಿಸಿದ ಬಗ್ಗೆ ಇತಿಹಾಸದಲ್ಲಿ ಉಲ್ಲೇಖವಿಲ್ಲ. ಅನಂತರ ಖಲೀಫರ ಆಡಳಿತದಲ್ಲಾಗಲೀ ಅಥವಾ ಅವರ ಅಸಂಖ್ಯಾತ, ಅತ್ಯಂತ ನಂಬಿಗಸ್ತ ಅನುಯಾಯಿಗಳ ಕಾಲದಲ್ಲಾಗಲೀ ಈ ರೀತಿಯಾಗಿ ಪ್ರವಾದಿ- ಮುಹಮ್ಮದರ(ಸ) ಜನ್ಮದಿನಾಚರಣೆಯನ್ನು ಆಚರಿಸಿದ ಬಗ್ಗೆ ಒಂದೇ ಒಂದು ದೃಷ್ಟಾಂತವೂ ಇಡೀ ಇಸ್ಲಾಮಿ ಇತಿಹಾಸವನ್ನು ತಡವಿ ಹಾಕಿದ್ದರೂ ಸಿಗುವುದಿಲ್ಲ. ಅವರ ಸಂಗಾತಿಗಳು, ಅವರ ಅನುಯಾಯಿಗಳು ಅವರ ಬಗ್ಗೆ ಅಪಾರ ಗೌರವ ಹಾಗೂ ಅತೀವ ಪ್ರೇಮವನ್ನು ಹೊಂದಿದ್ದರೆಂಬುದು ಗಮನಾರ್ಹ ಸಂಗತಿ. 'ಈದ್ ಮಿಲಾದ್'ನ ಆಚರಣೆಯು ಬೆಳೆದು ಬಂದ ಇತಿಹಾಸ ಕುತೂಹಲಕಾರಿಯಾಗಿದೆ.

ಅಲ್ ಅಝ್ಹರ್ ಫತ್ವಾ ಕಮಿಟಿಯ ಮಾಜಿ ಮುಖ್ಯಸ್ಥರಾದ ಶೈಖ್ ಅತಿಯ್ಯಾ ಸಖ್ರ್‌ರವರು ಉಲ್ಲೇಖಿಸಿರುವಂತೆ, ಇತಿಹಾಸಕಾರರ ಅನ್ವಯ ಪ್ರವಾದಿಯವರ(ಸ) ಜನ್ಮ ದಿನಾಚರಣೆಯನ್ನು ಮೊಟ್ಟ ಮೊದಲಿಗೆ ಫಾತಿಮಿಯರು ಆಚರಿಸಲು ಪ್ರಾರಂಭಿಸಿದರು. 'ಖಲ್ ಖಶಅನ್‌ದಿ' ತಮ್ಮ 'ಸುಬಹ್ ಉಲ್ ಆಅಶಾ' ಕೃತಿಯಲ್ಲಿ ಈಜಿಪ್ಟ್‌ನ

ಫಾತಿಮಿೂಯರು ಪ್ರವಾದಿವರ್ಯರ(ಸ) ಜನ್ಮ ದಿನಾಚರಣೆಯನ್ನು ಪ್ರಥಮತಃ ಪ್ರಾರಂಭಿಸಿದರಲ್ಲದೇ ಆ ದಿನವನ್ನು ಅತ್ಯಂತ ವೈಭವಯುತವಾಗಿ ಆಚರಿಸುತ್ತಿದ್ದರು ಹಾಗೂ ಸಿಹಿ ಹಂಚುತ್ತಿದ್ದರು ಎಂದು ದಾಖಲಿಸಿದ್ದಾರೆ.

ಮೂಲತಃ ಫಾತಿಮಿೂಯರು ಪ್ರವಾದಿ ಕುಟುಂಬದ ಇತರ ಸದಸ್ಯರ ಜನ್ಮ ದಿನಾಚರಣೆಯನ್ನೂ ಆಚರಿಸುತ್ತಿದ್ದರು. ಪ್ರವಾದಿ ಈಸಾರವರ(ಅ) ಜನ್ಮದಿನಾಚರಣೆಯನ್ನು ಸಹ ಅವರು ಆಚರಿಸುತ್ತಿದ್ದರು.

ಆದರೆ ಕ್ರಿ.ಶ. 488ರಲ್ಲಿ ಸೇನಾಧಿಪತಿ ಮತ್ತು ಗೌರವಾನ್ವಿತ ವ್ಯಕ್ತಿಯಾಗಿದ್ದ 'ಬದ್ರ್‌ಅಲ್ ಜಮಾದಿ'ಯವರ ಪುತ್ರ ಹಾಗೂ 'ಅಲ್‌ಅಫ್‌ದಲ್ ಶತುನ್‌ದಅ'ನ ಪ್ರಧಾನ ಮಂತ್ರಿಯಾಗಿದ್ದ ಹಾಗೂ ಪ್ರವಾದಿಚರ್ಯೆಯನ್ನು(ಸ) ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ 'ಖಲೀಫ ಅಲ್ ಮುಸ್ತಅ ಬಿಲ್ಲಾಹ್'ರವರು 'ಈದ್ ಮಿಲಾದ್'ನ ಆಚರಣೆಗಳನ್ನು ತಡೆದರು-ಎಂದು 'ಇಬ್ನ್ ಅಲ್ ಅತೀರ' ತಮ್ಮ 'ಅಲ್ ಕಮಾಲ್' ಎಂಬ (ಭಾಗ-8, ಪುಟ:302) ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದಾಗಿ ಜನಸಾಮಾನ್ಯರು ಇಂತಹ ಆಚರಣೆಗಳನ್ನು ನಿಲ್ಲಿಸಿದರು. ಕ್ರಿ.ಶ. 517ರಲ್ಲಿ 'ಅಲ್ ಮಾಮೂನ್'ನ 'ಅಲ್ ಬತಅದಿ' ಅಧಿಕಾರಕ್ಕೆ ಬಂದ ನಂತರ 12ನೆಯ ರಬೀವುಲ್ ಅವ್ವಲ್‌ನಂದು ಬಡಬಗ್ಗರಿಗೆ ದಾನ ಮಾಡುವಂತೆ ಸರ್ಕಾರಿ ಆದೇಶ ಹೊರಡಿಸಿದನು. 'ಸನಾಉಲ್ ಮಲಿಕ್' ಎಂಬಾತನನ್ನು ಈ ಕಾರ್ಯಕ್ಕಾಗಿ ನೇಮಿಸಲಾಗಿತ್ತು.

ಅಯ್ಯೂಬರು ಅಧಿಕಾರಕ್ಕೆ ಬಂದ ಮೇಲೆ, ಅವರು ಫಾತಿಮಿೂಯರಿಂದ ಬೆಳೆದು ಬಂದ ಎಲ್ಲ ಆಚರಣೆಗಳನ್ನು ನಿಲ್ಲಿಸಿದರು. ಆದರೂ ಬೇರೆಬೇರೆ ಕುಟುಂಬದವರು ಪ್ರವಾದಿವರ್ಯರ(ಸ) ಜನ್ಮ ದಿನಾಚರಣೆಯನ್ನು ತಮ್ಮ ತಮ್ಮ ಮನೆಗಳಲ್ಲಿ ಆಚರಿಸುತ್ತಿದ್ದರು.

7ನೆಯ ಶತಮಾನದ ಆರಂಭದಲ್ಲಿ ಮತ್ತೆ 'ಇರ್ಬಿಲ್' ನಗರದ ರಾಜಕುವರ 'ಮುಝಫ್ಫರ್ ಅಲ್‌ದೀನ್ ಅಬೀ ಸಅದ್ ಕವಾಕಿಬ್ ಇಬ್ನ್ ಝೈನುದ್ದೀನ್ ಅಲಿ ಇಬ್ನ್ ತಬಕತಿಕಿನ್'ನ ಸರ್ಕಾರಿ ಆದೇಶ ಹೊರಡಿಸುವುದರ ಫಲವಾಗಿ ಈ ಆಚರಣೆಗಳು ಪುನಃ ಪ್ರಾರಂಭವಾದವು. 'ಮುಝಫ್ಫರ್' ಈ ಆಚರಣೆಗಳಿಗೆ ಹೆಚ್ಚು ಪ್ರೋತ್ಸಾಹ ಹಾಗೂ ಗಮನ ನೀಡಿ 'ಸಫರ್' ತಿಂಗಳ ಆರಂಭದಿಂದಲೇ ವಿಶೇಷ ಡೇರೆಗಳನ್ನು ಹಾಕಲು ಆದೇಶಿಸಿದನು. 'ಅಲ್ ಖಲಅ' ಕಮಾನಿನಿಂದ 'ಖಂದಕ್' ಕಮಾನ್‌ವರೆಗೆ ಹರಡಿದ ಈ ಡೇರೆಗಳು ಉತ್ಕೃಷ್ಟ ರೀತಿಯಲ್ಲಿ ಅಲಂಕೃತಗೊಂಡಿರುತ್ತಿದ್ದವು. ಸ್ವಯಂ 'ಮುಝಫ್ಫರ'ನು 'ಅಸ್ರ್' ನಮಾಝ್‌ನ ನಂತರ ಈ ಡೇರೆಗಳಿಗೆ ಭೇಟಿ ನೀಡಿ ಅಲ್ಲಿಯ ಆಚರಣೆಗಳನ್ನು ವೀಕ್ಷಿಸುತ್ತಿದ್ದನು. ಈ ಆಚರಣೆಯನ್ನು ಕೆಲವು ಸಲ 8ನೆಯ ರಬೀವುಲ್ ಅವ್ವಲ್‌ನಂದು (ಕೆಲವು ಸಲ 12ನೆಯ ರಬೀವುಲ್ ಅವ್ವಲ್‌ನಂದು) ಆಚರಿಸಲಾಗುತ್ತಿದ್ದು, ಜನಸಾಮಾನ್ಯರು ಅದರಲ್ಲಿ ಪಾಲ್ಗೊಂಡು ಸವಿಯನ್ನನುಭವಿಸಲಿಕ್ಕಾಗಿ ಅಂದು ಸರ್ಕಾರಿ ರಜೆ ಘೋಷಿಸಲಾಗುತ್ತಿತ್ತು. ಮುಝಫ್ಫರ್‌ನ ಆದೇಶದ ಮೇರೆಗೆ ಈ ಆಚರಣೆಗೆ 2

ದಿನ ಮುಂಚಿತವಾಗಿ ಆಕಳು, ಮೇಕೆ, ಒಂಟೆಗಳನ್ನು ಮುಖ್ಯ ಪೇಟೆಯ ಸಂಭ್ರಮ ಸಡಗರಗಳ ಮಧ್ಯೆ ದಿಬಹ್ ಮಾಡಿದ ನಂತರ ಅಡುಗೆ ಮಾಡಿ ಜನರಿಗೆ ವಿತರಿಸಲಾಗುತ್ತಿತ್ತು.

'ಇಬ್ನ್ ಅಲ್ ಹಾಜ್ಜ್ ಅಬೂ ಅಬ್ದುಲ್ಲಾ ಅಲ್ ಅಬ್‌ದಾರವರು ದಾಖಲಿಸಿರು ವಂತೆ ಈಜಿಪ್ಟ್‌ನಲ್ಲಿ ಮುಝುಫ್ಫರ್‌ನ ಆಳ್ವಿಕೆಯ ಸಮಯದಲ್ಲಿ ಇಂತಹ ಆಚರಣೆಗಳು ವ್ಯಾಪಕವಾಗಿದ್ದವು ಎಂದಲ್ಲದೇ ಆ ಸಮಯದಲ್ಲಿನ 'ಬಿದ್‌ಅತ್'(ನವೀನ ಆಚರಣೆ) ಗಳನ್ನು ಬಲವಾಗಿ ಖಂಡಿಸಿರುವರು. **(ಅಲ್ ಮದ್‌ಖಲ್ ಭಾಗ-2, ಪುಟ: 11,12)**

ಹಿ. 7ನೆಯ ಶತಮಾನದಲ್ಲಿ ಪ್ರವಾದಿವರ್ಯರ(ಸ) ಜನ್ಮದಿನಾಚರಣೆಯ ಕುರಿತು ಅನೇಕ ಪುಸ್ತಕಗಳನ್ನು ಬರೆಯಲಾಗಿದೆ. ಉದಾಹರಣೆಗೆ 'ಇಬ್ನ್‌ದಹ್‌ಯಾ'ನ ಪುಸ್ತಕ ಇಬ್ನ್ ದಯಾನ ಕಥೆಗಳು (ಮರಣ ಹಿಜರಿ ಶಕೆ 633-ಈಜಿಪ್ಟ್), ಮುಹಿಯುದ್ದೀನ್ ಇಬ್ನ್ ಅಲ್ ಅರಬಿಯವರ ಕೃತಿ(ಮರಣ ಹಿಜರಿ ಶಕೆ 683- ಡಮಾಸ್ಕಸ್), ಇಬ್ನ್ ತಗರಬಿಕ್‌ರ ಕೃತಿ(ಮರಣ ಹಿಜರಿ ಶಕೆ 630 ಈಜಿಪ್ಟ್), ಅಹ್ಮದ್ ಅಲ್ ಅಝುಲಿ ಮತ್ತು ಅವರ ಮಗ ಮುಹಮ್ಮದ್‌ರ ಕೃತಿ (ಮರಣ ಹಿಜರಿ ಶಕೆ 670), ಇಂತಹ ದಿನಾಚರಣೆಗಳ ಸಮಯದಲ್ಲಿ ನಡೆಯುತ್ತಿದ್ದ ಎಲ್ಲ ಆಚರಣೆಗಳ ಕುರಿತು ಅವು 'ಬಿದ್‌ಅತ್'(ನವೀನ ಆಚರಣೆ) ಹಾಗೂ ನಿರಾಧಾರ ಎಂಬುದಾಗಿ ಎಲ್ಲ ಶ್ರೇಷ್ಠ ವಿದ್ವಾಂಸರು ಘೋಷಿಸಿದ್ದರು. ಇವರಲ್ಲಿ ಮುಖ್ಯವಾಗಿ 'ಅಲ್ ಫಾಕಹಾನಿ' ಎಂದು ಗುರುತಿಸಲ್ಪಡುವ ಮಾಲಿಕಿ ನ್ಯಾಯಾಧೀಶ ಹ. ತಾಜುದ್ದೀನ್ ಉಮರ್ ಇಬ್ನ್ ಅಲ್ ಲಖಮಿ ಅಲ್ ಸಿಕಂದರಿಯವರು(ಮರಣ ಹಿಜರಿ ಶಕೆ, 731) ಈ ವಿಷಯದ ಮೇಲೆ 'ಅಲ್ ಮಾಉರಿದ್ ಫಿಲ್ ಕಲಾಮ್ ಅಲ್ ಮೌಲಿದ್' ಎಂಬ ಕೃತಿಯನ್ನು ರಚಿಸಿದ್ದಾರೆ. 'ಸುಯೂತಿ'ಯವರು ತಮ್ಮ 'ಹುಸ್ನ್ ಅಲ್‌ಮಕಾದ್' ಗ್ರಂಥದಲ್ಲಿ ಇದನ್ನು ಉಲ್ಲೇಖಿಸಿದ್ದಾರೆ. 9ನೆಯ ಶತಮಾನದಲ್ಲಿ ಶೈಖ್ ಮುಹಮ್ಮದ್ ಫದಲ್ ಆಶ್ಯೂರ್‌ರ ಪ್ರಕಾರ ವಿದ್ವಾಂಸರಲ್ಲಿ ಈ ಕುರಿತು ಭಿನ್ನಾಭಿಪ್ರಾಯ ಉಂಟಾಯಿತು. ಕೆಲವರು ಇದನ್ನು ಅನುಮತಿಸಿದರೆ, ಇನ್ನು ಕೆಲವರು ಇದನ್ನು ವಿರೋಧಿ ಸಿದರು. 'ಸುಯೂತಿ', 'ಇಬ್ನ್ ಹಜರ್ ಅಲ್ ಅಸ್‌ಕಲಾನಿ' ಮತ್ತು 'ಇಬ್ನ್ ಹಜರ್ ಅಲ್ ಹಯಾತ್' ಮುಂತಾದವರು ಇದಕ್ಕೆ ಬೆಂಬಲ ನೀಡಿದರಾದರೂ ಇಂತಹ ದಿನಾಚರಣೆಗಳ ಹೆಸರಲ್ಲಿ ನಡೆಸಲಾಗುವ 'ಬಿದ್‌ಅತ್'ಗಳನ್ನು ಪ್ರಬಲವಾಗಿ ಖಂಡಿಸಿದರು.

ಅಲ್ ಬೈಹಕಿ, "ಶುಅಬುಲ್ ಈಮಾನ್"ನಲ್ಲಿ ಉಲ್ಲೇಖಿಸಿರುವಂತೆ, ಹ. ಇಬ್ನ್ ಸಈದ್ ವರದಿ ಮಾಡಿರುವರು- ಪ್ರವಾದಿ(ಸ) ಹೇಳಿದರು, ಅಲ್ಲಾಹನ ದಿನಗಳು ಅಲ್ಲಾಹನ ಅನುಗ್ರಹ ಹಾಗೂ ಆತನ ಚಿಹ್ನೆಗಳಾಗಿವೆ ಹಾಗೂ ಪ್ರವಾದಿಯ ಜನನವು ಅತ್ಯಂತ ದೊಡ್ಡ ಅನುಗ್ರಹವಾಗಿದೆ. (ಅಲ್ ಅಲೂಸಿಯವರ ರೂಹುಲ್ ಮಆನಿ)

ವಿಶ್ವವಿಖ್ಯಾತ ವಿದ್ವಾಂಸ ಶೈಖ್ ಯೂಸುಫ್ ಅಲ್ ಕರ್ದಾವಿಯವರ ಪ್ರಕಾರ ಪ್ರವಾದಿ ಮುಹಮ್ಮದರ(ಸ) ಜನನ 9ನೆಯ ರಬೀವುಲ್ ಅವ್ವಲ್, ಸೋಮವಾರ ಕ್ರಿ.ಶ. 571 ಏಪ್ರಿಲ್ 20 ಅಥವಾ 22ರಲ್ಲಾಯಿತು ಹಾಗೂ ಅವರ ಮರಣವು 11ನೆಯ

ಹಿಜರಿ ಶಕೆ, 12ನೆಯ ರಬೀವುಲ್ ಅವ್ವಲ್, ಕ್ರಿ.ಶ. 632 ಜೂನ್ 8ರಲ್ಲಾಗಿತ್ತು. ಪ್ರವಾದಿ ಮುಹಮ್ಮದರ(ಸ) ಜೀವನದ ಅಧ್ಯಯನ ಹಾಗೂ ಅನುಸರಣೆಗಾಗಿ ಅವರು ಕುರ್‌ಆನಿನ ಈ ಕೆಳಗಿನ ಸೂಕ್ತವನ್ನು ಉದಾಹರಿಸುತ್ತಾರೆ-

"ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು." (ಪವಿತ್ರ ಕುರ್‌ಆನ್, 33:21)

ಇನ್ನೋರ್ವ ಹೆಸರಾಂತ ವಿದ್ವಾಂಸ ದಿವಂಗತ ಶೈಖ್ ಇಬ್ನ್ ಬಾಝ್ ಅವರು, 'ಜನ್ಮದಿನಾಚರಣೆಗೆ ಪವಿತ್ರ ಶರೀಅತ್‌ನ ಆಧಾರದಲ್ಲಿ ಯಾವುದೇ ಸ್ಥಾನವಿಲ್ಲ. ಇದೊಂದು ಬಿದ್‌ಅತ್ ಆಗಿದೆ' ಎಂದು ಅವರು ಸ್ಪಷ್ಟವಾಗಿ ಹೇಳಿರುವರು.

ಆದರೆ ಪ್ರವಾದಿ ಮುಹಮ್ಮದರ(ಸ) ಜೀವನದ ಅನುಸರಣೆಯ ಮಹತ್ವದ ಕುರಿತು ಯಾವುದೇ ಎರಡು ಮಾತಿಲ್ಲ. ಕುರ್‌ಆನ್ ಈ ಕುರಿತು ಸ್ಪಷ್ಟ ಚಿತ್ರಣ ನೀಡುತ್ತದೆ:

"ಓ ಪೈಗಂಬರರೇ, ನೀವು ಜನರೊಡನೆ ಹೀಗೆ ಹೇಳಿ ಬಿಡಿರಿ, ನೀವು ನಿಜವಾಗಿಯೂ ಅಲ್ಲಾಹನನ್ನು ಪ್ರೀತಿಸುತ್ತೀರೆಂದಾದರೆ ನನ್ನ ಅನುಕರಣೆ ಮಾಡಿರಿ, ಅಲ್ಲಾಹ್ ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು." (ಪವಿತ್ರ ಕುರ್‌ಆನ್, 3:31)

ಮತ್ತು "ಓ ಪೈಗಂಬರರೇ, ಹೇಳಿರಿ, ನಾನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯ, ನಿಮ್ಮ ದೇವನು ಏಕಮಾತ್ರ ದೇವನೆಂದು ನನ್ನ ಕಡೆಗೆ ವಹ್ಯ್(ದಿವ್ಯವಾಣಿ) ಮಾಡಲಾಗುತ್ತಿದೆ. ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ಆರಾಧನೆಯಲ್ಲಿ ತನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರಲಿ."

(ಪವಿತ್ರ ಕುರ್‌ಆನ್, 18:110)

ಹೀಗೆ ಪ್ರವಾದಿ ಮುಹಮ್ಮದರ(ಸ) ಅನುಸರಣೆಗಾಗಿ ಪ್ರೇರಣೆ ನೀಡುವಂತೆಯೇ ಅವರ ವ್ಯಕ್ತಿಪೂಜೆಯಿಂದಲೂ ತಡೆಯಲಾಗಿದೆ.

ಇಸ್ಲಾಮ್ ಧರ್ಮವು ವ್ಯಕ್ತಿಪೂಜೆಯ ಎಲ್ಲ ಬಾಗಿಲುಗಳನ್ನು ಮುಚ್ಚಿದೆ. ಆದರೆ ಜನ್ಮ ದಿನಾಚರಣೆಯ ಹೆಸರಿನಲ್ಲಿ ಇಂತಹದೊಂದು ಆಚರಣೆ ಹಬ್ಬದ ವೇಷ ಧರಿಸಿ ನುಸುಳಿಕೊಂಡದ್ದು ದುರದೃಷ್ಟಕರ.

ಪ್ರವಾದಿವರ್ಯರ(ಸ) ಸಂಗಾತಿಗಳ ದೃಷ್ಟಿಯಲ್ಲಿ ಪ್ರವಾದಿವರ್ಯರೇ(ಸ) ಜಗತ್ತಿನ ಅತ್ಯಂತ ಹೆಚ್ಚು ಪ್ರೀತ್ಯಾರ್ಹ ವ್ಯಕ್ತಿಯಾಗಿದ್ದರು. ಆದರೂ ಅವರು ಪ್ರವಾದಿವರ್ಯರನ್ನು(ಸ) ಕಂಡಾಗ ಎದ್ದು ನಿಲ್ಲುತ್ತಿರಲಿಲ್ಲ. ಏಕೆಂದರೆ ಅಂತಹ ಕ್ರಮವನ್ನು ಪ್ರವಾದಿವರ್ಯರು(ಸ) ಮೆಚ್ಚುವುದಿಲ್ಲ ಎಂಬುದು ಅವರಿಗೆ ತಿಳಿದಿತ್ತು. (ಹ.ಅನಸ್(ರ)-ತಿರ್ಮಿದಿ)

ಹೀಗೆ 'ಪ್ರವಾದಿ ಪ್ರೇಮ'ದ ಚೌಕಟ್ಟು ಸ್ಪಷ್ಟವಾಗಿದೆ. ಅವರ(ಸ) ಜೀವನದ ಕುರಿತು ಅರಿತು ಅನುಸರಿಸಬೇಕಾಗಿದೆ. "ನಾವು ಇದಕ್ಕಿಂತ ಮುಂಚೆ ಮೂಸಾರನ್ನು(ಅ) ನಮ್ಮ ನಿದರ್ಶನಗಳೊಂದಿಗೆ ರವಾನಿಸಿದ್ದೆವು. ನಿಮ್ಮ ಜನಾಂಗವನ್ನು ಅಂಧಕಾರಗಳಿಂದ ಹೊರ ತೆಗೆದು ಪ್ರಕಾಶಕ್ಕೆ ತರಬೇಕೆಂದೂ, ಅವರಿಗೆ 'ಅಯ್ಯಾಮಿಲ್ಲಾಹ್'(ದಿವ್ಯದಿನ)ಗಳ ಬೋಧಪ್ರದ ಘಟನೆಗಳನ್ನು ಹೇಳಿ ತಿಳಿಸಿ ಉಪದೇಶಿಸಬೇಕೆಂದೂ ನಾವು ಅವರಿಗೆ ಅಪ್ಪಣೆ

ಕೊಟ್ಟಿದ್ದೆವು. ಈ ಘಟನೆಗಳಲ್ಲಿ ನಿಶ್ಚಯವಾಗಿಯೂ ಪ್ರತಿಯೊಬ್ಬ ಸಹನಶೀಲನಿಗೂ ಕೃತಜ್ಞನಿಗೂ ದೊಡ್ಡ ನಿದರ್ಶನಗಳಿವೆ" (ಪವಿತ್ರ ಕುರ್‌ಆನ್ 14:5) ಅದೇ ವೇಳೆ 'ಪ್ರವಾದಿ ಪ್ರೇಮ'ದ ಹೆಸರಿನಲ್ಲಿ ಹುಟ್ಟಿಕೊಂಡಿರುವ ಗೊಡ್ಡು ಸಂಪ್ರದಾಯಗಳಿಗೆ ವಿದಾಯ ಹೇಳಬೇಕಿದೆ.

ಹ. ಜಾಬಿರ್ ಬಿನ್ ಅಬ್ದುಲ್ಲಾ(ರ) ವರದಿ ಮಾಡಿರುವಂತೆ, ಪ್ರವಾದಿ ಮುಹಮ್ಮದ್(ಸ) ಖುತ್ಬಾದಲ್ಲಿ ಹೀಗೆ ಹೇಳುತ್ತಿದ್ದರು, "ಅಲ್ಲಾಹನ ಗ್ರಂಥವೇ ಅತ್ಯುತ್ತಮ ವಚನವಾಗಿದೆ. ಮುಹಮ್ಮದರ(ಸ) ವಿಧಾನವೇ ಅತ್ಯುತ್ತಮ ವಿಧಾನವಾಗಿದೆ. 'ಬಿದ್‌ಅತ್'ಗಳು ಅತ್ಯಂತ ಕೆಟ್ಟ ವಿಷಯಗಳಾಗಿವೆ ಮತ್ತು ಪ್ರತಿಯೊಂದು 'ಬಿದ್‌ಅತ್' ಪಥಭ್ರಷ್ಟತೆಯಾಗಿದೆ." (ಮುಸ್ಲಿಮ್)

ಪ್ರವಾದಿಗಳೆಲ್ಲರನ್ನೂ ಅಲ್ಲಾಹನು ಪ್ರಾಯೋಗಿಕ ಅನುಸರಣಾ ಮಾದರಿಗಳನ್ನಾಗಿ ಮಾಡಿ ಕಳುಹಿಸಿರುವನೆಂಬುದಂತೂ ನಿಸ್ಸಂಶಯ. ಆದ್ದರಿಂದ ಅವರ ಜೀವನಕ್ರಮದ ಅಧ್ಯಯನವು ಅನುಸರಣಾ ದೃಷ್ಟಿಯಿಂದ ಅವಶ್ಯವಾಗಿದೆ. ಆದರೆ ಅವರ ಜನನ ಅಥವಾ ಮರಣದಂತಹ ಘಟನೆಗಳನ್ನು ಹಬ್ಬದ ರೂಪದಲ್ಲಿ ಆಚರಿಸುವುದರಿಂದ ಅವರ ಜೀವನದ ಸಂದೇಶವು ಮರೆಯಾಗಿ ಅವರ ವ್ಯಕ್ತಿತ್ವದ ವೈಭವೀಕರಣವಾಗಿ ಬಿಡುತ್ತದೆ.

❑ ❑ ❑

ಶಬೆ ಮಿಲ್‌ರಾಜ್

'ಮಿಲ್‌ರಾಜ್' ಅಥವಾ 'ಇಸ್‌ರಾ' ಎಂದು ಪ್ರಸಿದ್ಧವಾಗಿರುವ ಐತಿಹಾಸಿಕ ಘಟನೆಯು ನಂಬಲರ್ಹ ವರದಿಗಳ ಪ್ರಕಾರ ಹಿಜ್ರತ್‌ಗಿಂತ 1 ವರ್ಷ ಮುಂಚೆ ಸಂಭವಿಸಿತು. 'ಶಬೆ ಮಿಲ್‌ರಾಜ್' ಎಂದರೆ 'ಮಿಲ್‌ರಾಜ್'ನ ಘಟನೆ ನಡೆದ ರಾತ್ರಿ. ಅದು 'ರಜಬ್' ತಿಂಗಳ 27ನೆಯ ರಾತ್ರಿಯಾಗಿತ್ತು.

"ತನ್ನ ಕೆಲವು ನಿದರ್ಶನಗಳನ್ನು ತೋರಿಸಿಕೊಡಲಿಕ್ಕಾಗಿ, ತನ್ನ ದಾಸನನ್ನು ಒಂದು ರಾತ್ರಿ ಮಸ್ಜಿದುಲ್ ಹರಾಮ್‌ನಿಂದ, ನಾವು ಪರಿಸರವನ್ನು ಸಮೃದ್ಧಗೊಳಿಸಿರುವಂತಹ ಅಕ್ಸಾ ಮಸೀದಿಯ ತನಕ ಕೊಂಡು ಹೋದವನು ಪರಮ ಪಾವನನು. ನಿಶ್ಚಯವಾಗಿಯೂ ಅವನು ಸರ್ವಶ್ರುತನೂ ಸರ್ವವೀಕ್ಷಕನೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್, 17:1)

ಆ ಪವಿತ್ರ ರಾತ್ರಿಯಂದು ಪ್ರವಾದಿವರ್ಯರನ್ನು(ಸ) ಅತ್ಯಂತ ಉನ್ನತ ಸ್ಥಾನದ ವರೆಗೆ ಕೊಂಡೊಯ್ಯಲಾಯಿತು. ಒಬ್ಬ ಸಾಮಾನ್ಯ ಮನುಷ್ಯನ ಕಲ್ಪನೆಗೂ ನಿಲುಕಲಾರದಂತಹ ಘಟನೆಯಾಗಿತ್ತದು.

ಈ ಘಟನೆ ನಡೆದಾಗ ಪ್ರವಾದಿ ಮುಹಮ್ಮದ್‌ರಿಗೆ(ಸ) ಪ್ರವಾದಿತ್ವ ದೊರೆತು 12 ವರ್ಷವಾಗಿತ್ತು. ಅವರ ಪ್ರಾಯ 52 ವರ್ಷಗಳಾಗಿತ್ತು. ತಮ್ಮ ಚಿಕ್ಕಪ್ಪನ ಮಗಳು ಉಮ್ಮುಹಾನಿಯವರ ಮನೆಯಲ್ಲಿ ಮಲಗಿದ್ದ ಪ್ರವಾದಿ ಮುಹಮ್ಮದ್‌ರನ್ನು(ಸ) ಹ. ಜಿಬ್ರೀಲ್‌ರವರು(ಅ) ಎಬ್ಬಿಸಿ ಸಶರೀರವಾಗಿ 'ಬುರಾಕ್' ಎಂಬ ಪ್ರಾಣಿಯ ಸವಾರಿಯ ಮೂಲಕ 'ಬೈತುಲ್ ಮಕ್ದಿಸ್' (ಪ್ರಸ್ತುತಃ ಇಸ್ರಾಈಲ್‌ನ ಭೂ ಪ್ರದೇಶ)ವರೆಗೆ ಕರೆದೊಯ್ದರು. ಅಲ್ಲಿ ಅವರು ಗತ ಪ್ರವಾದಿಗಳೆಲ್ಲರನ್ನೂ ಭೇಟಿ ಮಾಡಿದುದಲ್ಲದೇ ಸ್ವಯಂ ತಾವು ನೇತೃತ್ವ ವಹಿಸಿ ನಮಾಝ್ ನೆರವೇರಿಸಿದರು. ಅಲ್ಲಿಂದ ಮುಂದೆ ಸಾಗಲು ಅವರಿಗೆ ಸೋಪಾನ ನೀಡಲಾಯಿತು. 'ಬುರಾಕ'ನ್ನು ಅಲ್ಲಿಯೇ ಕಟ್ಟಿ ಹಾಕಿ ಸೋಪಾನದ ಮೂಲಕ ಪ್ರವಾದಿ ಮುಹಮ್ಮದರು(ಸ) ಆಕಾಶದ ಮೊದಲ ಅಂತಸ್ತಿಗೆ ಪ್ರಯಾಣ ಬೆಳೆಸಿದರು. ಅರಬಿ ಭಾಷೆಯಲ್ಲಿ ಸೋಪಾನವನ್ನು 'ಮಿಅ್‌ರಾಜ್' ಎನ್ನಲಾಗುತ್ತದೆ. ಇಲ್ಲಿ ಸೋಪಾನವನ್ನು ಬಳಸಿದ್ದರಿಂದ ಈ ಘಟನೆಯನ್ನು 'ಮಿಅ್‌ರಾಜ್'ನ ಘಟನೆ ಎಂದೂ ಈ ರಾತ್ರಿಯನ್ನು 'ಶಬೆ ಮಿಅ್‌ರಾಜ್' ಎಂದೂ ಸಾಮಾನ್ಯವಾಗಿ ಕರೆಯಲಾಗುತ್ತದೆ.

ಪ್ರವಾದಿಯವರು(ಸ) ಆಕಾಶದ ಮೊದಲನೆಯ ಅಂತಸ್ತಿನಲ್ಲಿ ಹ. ಆದಮ್‌ರನ್ನು(ಅ), ಎರಡನೆಯ ಅಂತಸ್ತಿನಲ್ಲಿ ಹ. ಯಹ್ಯಾ ಮತ್ತು ಹ. ಈಸಾರನ್ನು(ಅ), ಮೂರನೆಯ ಅಂತಸ್ತಿನಲ್ಲಿ ಹ.ಯೂಸುಫ್‌ರನ್ನು(ಅ), ನಾಲ್ಕನೆಯ ಅಂತಸ್ತಿನಲ್ಲಿ ಹ. ಇದ್ರೀಸ್‌ರನ್ನು(ಅ), ಐದನೆಯ ಅಂತಸ್ತಿನಲ್ಲಿ ಹ. ಹಾರೂನ್‌ರನ್ನು(ಅ), ಆರನೆಯ ಅಂತಸ್ತಿನಲ್ಲಿ ಹ.ಮೂಸಾ(ಅ) ಹಾಗೂ ಏಳನೇ ಅಂತಸ್ತಿನಲ್ಲಿ 'ಬೈತುಲ್ ಮಅ್‌ಮೂರ್' (ಭವ್ಯ ಭವನ)ವನ್ನು ಕಂಡದ್ದಲ್ಲದೇ, ತಮ್ಮನ್ನೇ ಹೋಲುವಂತಿದ್ದ ಹ.ಇಬ್ರಾಹೀಮರನ್ನೂ(ಅ) ಭೇಟಿಯಾದರು. ಮುಂದೆ "ಸಿದ್‌ರತುಲ್ ಮುಂತಹಾ' ಎಂಬಲ್ಲಿ ಸಾಗಿದ ಬಳಿಕ ಹ.ಜಿಬ್ರೀಲ್(ಅ) ನಿಂತು ಬಿಟ್ಟರು. ಅಲ್ಲಿಂದ ಮುಂದೆ ಸಾಗಿದ ಬಳಿಕ ಪ್ರವಾದಿವರ್ಯರು(ಸ) ಅಲ್ಲಾಹನೊಡನೆ ಸಂಭಾಷಿಸಿದರು. ಇದೇ ಪ್ರಯಾಣದಲ್ಲಿ ದಿನಕ್ಕೆ 5 ಸಲ 'ಕಡ್ಡಾಯ ನಮಾಝ್' ನೆರವೇರಿಸುವ ಕರ್ತವ್ಯದ ಆದೇಶವನ್ನು ನೀಡಲಾಯಿತು, ಸ್ವರ್ಗ ಮತ್ತು ನರಕಗಳ ದರ್ಶನವನ್ನು ಮಾಡಿಸಲಾಯಿತು. ಅಲ್ಲಿಂದ ಪ್ರವಾದಿ ವರ್ಯರು(ಸ) 'ಬೈತುಲ್ ಮಕ್ದಿಸ್'ವರೆಗೆ ಹಿಂತಿರುಗಿ ಮತ್ತೆ ಎಲ್ಲ ಪ್ರವಾದಿಗಳ ನೇತೃತ್ವ ವಹಿಸಿ 'ಫಜ್ರ್'ನ ನಮಾಝನ್ನು ನೆರವೇರಿಸಿ ಮತ್ತೆ 'ಬುರಾಕ್'ನ ಮೂಲಕ ಕಅಬಾ ತಲುಪಿದರು.

ಈ ಯಾತ್ರೆಯ ಸಮಯದಲ್ಲಿ ನೀಡಲಾದ ಆದೇಶಗಳಾವುವೆಂದರೆ, ಏಕದೇವ ವಿಶ್ವಾಸದ ಪಾಲನೆ, ಮಾತಾಪಿತರ ಸೇವೆ, ಸಾಮಾಜಿಕ ಜೀವನದಲ್ಲಿ ಪರಸ್ಪರ ನ್ಯಾಯ ಪಾಲನೆ, ಬಂಧು-ಬಳಗ ಆಪ್ತೇಷ್ಟರಿಗೆ ಸಹಾಯ ಹಸ್ತ, ಬಡವರಿಗೆ ಮತ್ತು ಪ್ರಯಾಣಿಕರಿಗೆ ನೆರವು, ಸಂಪತ್ತಿನ ಸದ್ಬಳಕೆ, ದುಂದುವೆಚ್ಚಕ್ಕೆ ತಡೆ, ವ್ಯಭಿಚಾರಕ್ಕೆ ನಿಷೇಧ, ಮುಗ್ಧ ಮಾನವ ಹತ್ಯೆಗೆ ವಿರೋಧ, ಅನಾಥರ ಸೊತ್ತು ರಕ್ಷಣೆ, ತೂಕ ಮತ್ತು ಅಳತೆಯಲ್ಲಿ

ನ್ಯಾಯಪಾಲನೆ, ವಚನಪಾಲನೆ, ಬಹುದೇವಾರಾಧನೆಯ ಹೊರತು ಇತರ ಎಲ್ಲ ಪಾಪಗಳ ಮನ್ನಣೆಯ ಸಾಧ್ಯತೆ... ಇತ್ಯಾದಿ.

ಈ ಘಟನೆಯನ್ನು ವಿವರಿಸುವ ಇನ್ನೊಂದು ಸೂಕ್ತದಲ್ಲಿ 'ರುಅ್‌ಯಾ' ಎಂಬ ಪದವನ್ನು ಬಳಸಲಾಗಿದ್ದು, ಅದು 'ಕಣ್ಣಾರೆ ಕಾಣುವುದು' ಎಂಬರ್ಥವನ್ನು ಹೊಂದಿದೆ. ಈ ಘಟನೆಯು ಸ್ವಪ್ನವಾಗಿದ್ದಲ್ಲಿ ಸತ್ಯವಿಶ್ವಾಸಿಗಳ ಪಾಲಿಗೆ ಪರೀಕ್ಷೆಯಾಗುತ್ತಿರಲಿಲ್ಲ. ಏಕೆಂದರೆ ಎಂತಹ ವಿಚಿತ್ರ ಸ್ವಪ್ನವನ್ನು ವಿವರಿಸಿದರೂ, ಸುಲಭವಾಗಿ ನಂಬಲು ಸಾಧ್ಯವಿದೆ. ಅಣಕ ಮಾಡುವ ಪ್ರಶ್ನೆಯೇ ಏಳುವುದಿಲ್ಲ. ಪ್ರವಾದಿ ಮುಹಮ್ಮದರು(ಸ) 'ಬೈತುಲ್ ಮಕ್ದಿಸ್'(ಇಸ್ರಾಈಲ್‌ನ ಜೆರೂಸಲೇಮ್ ಪ್ರದೇಶ)ನ್ನು ಮೊದಲೆಂದೂ ಕಂಡಿರಲಿಲ್ಲ. ಒಂದೇ ರಾತ್ರಿಯಲ್ಲಿ ಅಷ್ಟೊಂದು ದೂರ ಪಯಣಿಸಿ ಹಿಂತಿರುಗುವುದಂತೂ ಸಾಧ್ಯವೇ ಇಲ್ಲ. ಆದರೆ ಕೇಳುಗರಿಗೆ ಆ ಪ್ರಯಾಣ, ಪ್ರದೇಶಗಳ ಗುರುತುಗಳ ನಿಖರವಾದ ವಿವರಣೆಗಳನ್ನು ನೀಡಿ ಪ್ರವಾದಿವರ್ಯರು(ಸ), 'ಮಿಅ್‌ರಾಜ್' ಸ್ವಪ್ನವಲ್ಲ, 'ಸತ್ಯ ಘಟನೆ' ಎಂದು ಸಾಬೀತು ಮಾಡಿದರು.

ಪ್ರವಾದಿಗಳೆಲ್ಲರಿಗೂ ಅವರ ಸ್ಥಾನಮಾನದ ಪ್ರಕಾರ ಅಲ್ಲಾಹನು ಅವರ ಮುಂದೆ ಲೌಕಿಕ ತೆರೆಯನ್ನು ಸರಿಸಿ ತನ್ನ ಪ್ರಚಂಡ ಸೃಷ್ಟಿಯ ಸಮ್ಯಕ್-ದರ್ಶನವನ್ನು ಮಾಡಿಸಿದ್ದಾನೆ. 'ಮಿಅ್‌ರಾಜ್'ನ ಘಟನೆಯು ಸತ್ಯನಿಷೇಧಿಗಳಿಗೆ ಕುಹಕ ವ್ಯಂಗ್ಯಗಳಿಗೆ ದಾರಿ ಮಾಡಿ ಕೊಟ್ಟರೆ ಸತ್ಯವಿಶ್ವಾಸಿಗಳ ದೃಢನಂಬುಗೆಯನ್ನು ಹೆಚ್ಚಿಸಿತು.

'ಶಬೆ ಮಿಅ್‌ರಾಜ್'ನ ಕುರಿತು ಹೆಸರಾಂತ ಉರ್ದು ಕವಿ ಅಲ್ಲಾಮಾ ಇಕ್ಬಾಲರು ಈ ರೀತಿ ನುಡಿದಿರುವರು:

"ಅಖ್ತರೆ ಶಾಮ್ ಕೀ ಆತೀ ಹೈ ಫಲಕ್ ಸೆ ಆವಾಝ್
ಸಜ್ದಾಃ ಕರ್ತೀ ಹೈ ಸಹರ್ ಜಿಸ್‌ಕೊ ವೊ ಹೈ ಆಜ್‌ಕಿ ರಾತ್,
ರಹೆ ಯಕ್‌ಗಾಮ್ ಹೈ ಹಿಮ್ಮತ್ ಕೆ ಲಿಯೇ ಅರ್ಶೆ ಬರೀಂ
ಕಹ್ ರಹೀ ಹೈ ಏ ಮುಸಲ್ಮಾನ್ ಸೆ ಮಿಅ್‌ರಾಜ್ ಕಿ ರಾತ್"

"ಸಂಜೆಯ ತಾರೆಯ ಧ್ವನಿಯು ದಿಗಂತದಿಂದ ಕೇಳಿ ಬರುತ್ತಿದೆ, ಯಾವ ರಾತ್ರಿಗೆ ಮುಂಜಾನೆಯು ಸಾಷ್ಟಾಂಗವೆರಗುತ್ತದೆಯೋ ಅದು ಇಂದಿನ ರಾತ್ರಿಯಾಗಿದೆ. ಧೈರ್ಯವಿದ್ದರೆ ವಿಶ್ವಸಿಂಹಾಸನವು ಕೇವಲ ಒಂದೇ ಹೆಜ್ಜೆಯ ಅಂತರದಲ್ಲಿದೆ ಎಂದು ಹೇಳುತ್ತಿದೆ ಮುಸ್ಲಿಮನನ್ನುದ್ದೇಶಿಸಿ ಮಿಅ್‌ರಾಜ್‌ನ ರಾತ್ರಿ."

(ಇಕ್ಬಾಲರ ಕವನಗಳು: ಜ| ಇಬ್ರಾಹೀಮ್ ಸಈದ್)

ಪ್ರವಾದಿ ಮುಹಮ್ಮದರ(ಸ) ಮಕ್ಕಾದ ಜೀವನದಲ್ಲಿ, ಅವರ ಅನೇಕ ವರ್ಷಗಳ ಪರಿಶ್ರಮದ ನಂತರವೂ ಸತ್ಯಧರ್ಮದ ಪ್ರಚಾರದಲ್ಲಿ ಅವರಿಗೆ ನಿರೀಕ್ಷಿತ ಫಲ ದೊರೆಯಲಿಲ್ಲ. ಸತ್ಯಧರ್ಮ ಪ್ರಚಾರಕ್ಕಾಗಿ 'ತಾಯಿಫ್' ಎಂಬ ಪಟ್ಟಣಕ್ಕೆ ಹೋದಾಗ ಅವರನ್ನು ಅಪಮಾನಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮಿಅ್‌ರಾಜ್‌ನ ರಾತ್ರಿಯು ಅವರನ್ನು ಗೌರವಿಸಿದುದಲ್ಲದೇ ಅವರ ಯಶಸ್ಸಿನ ಸುವಾರ್ತೆಯನ್ನು ನೀಡಿದುದನ್ನು, ಹ.ಅಲ್ಲಾಮಾ

ಇಕ್ಬಾಲರು ಮೇಲಿನ ಕವಿತೆಯಲ್ಲಿ, ಮುಸ್ಲಿಮರು ಸತ್ಯಧರ್ಮದ ಪ್ರಚಾರವನ್ನು ಧೈರ್ಯದಿಂದ ಕೈಗೊಂಡರೆ ಯಶಸ್ಸಿನ ಉತ್ತುಂಗಕ್ಕೇರಬಲ್ಲರು ಎಂದು ಹೇಳಿದ್ದಾರೆ.

ಈ ಐತಿಹಾಸಿಕ ಯಾತ್ರೆಯ ಸ್ಮರಣಾರ್ಥವಾಗಿ ಕೆಲವೆಡೆ ಮುಸ್ಲಿಮರು ಅಂದು ತಮ್ಮ ಮನೆ, ಬೀದಿ ಹಾಗೂ ಮಸೀದಿಗಳನ್ನು ಅಲಂಕರಿಸುತ್ತಾರೆ. ಸಾಯಂಕಾಲ ವಿದ್ಯುತ್ ದೀಪಗಳಿಂದ ಬೆಳಗುತ್ತಾರೆ. ಕೆಲವರು ಹಣತೆ ಹಾಗೂ ಮೇಣದ ಬತ್ತಿಗಳನ್ನು ಹಚ್ಚಿಡುವುದುಂಟು. ರಾತ್ರಿ 'ಇಶಾ' ನಮಾಝ್‌ನ ನಂತರ ಮಸೀದಿಗಳಲ್ಲಿ ಕೆಲವೆಡೆ ಧಾರ್ಮಿಕ ಸಭೆಗಳನ್ನು ನಡೆಸುತ್ತಾರೆ, ಅಲ್ಲಾಹನನ್ನು ಸ್ತುತಿಸುವ ಹಾಗೂ ಪ್ರವಾದಿ ಮುಹಮ್ಮದರ(ಸ) ಪ್ರಶಂಸೆಯ ಗೀತೆಗಳನ್ನು ಹಾಡಲಾಗುತ್ತದೆ, ಸಿಹಿ ಹಂಚಲಾಗುತ್ತದೆ ಹಾಗೂ ಕೆಲವರು ಅಂದು ರಾತ್ರಿ ಇಡೀ ಜಾಗರಣೆ ಮಾಡಿ ಪ್ರಾರ್ಥನೆ, ಆರಾಧನೆಗಳಲ್ಲಿ ಕಾಲ ಕಳೆಯುತ್ತಾರೆ.

ಆದರೆ ಈ ರೀತಿಯಾಗಿ ಹಬ್ಬದ ರೂಪದಲ್ಲಿ 'ಶಬೆ ಮಿಅ್‌ರಾಜ್' ಆಚರಿಸಲ್ಪಟ್ಟದ್ದಕ್ಕೆ ಕುರ್‌ಆನ್ ಮತ್ತು ಪ್ರವಾದಿಚರ್ಯೆಯಲ್ಲಿ ಯಾವುದೇ ಆಧಾರವಿಲ್ಲ.

❑ ❑ ❑

ಶಬೆ ಬರಾತ್

'ಶಅಬಾನ್' ತಿಂಗಳ 15ನೆಯ ತಾರೀಕಿನಂದು 'ಶಬೆ ಬರಾತ್' ಅನ್ನು ಆಚರಿಸುವುದು ರೂಢಿಯಲ್ಲಿದೆ. ಅದಕ್ಕೆ ಸಂಬಂಧಿಸಿದಂತೆ ಹಲವಾರು ತರದ ಆಚರಣೆಗಳು ಜಾರಿಯಲ್ಲಿವೆ.

ಪ್ರವಾದಿ ಮುಹಮ್ಮದರು(ಸ) 'ಶಅಬಾನ್' ತಿಂಗಳಲ್ಲಿ ವಿಶಿಷ್ಟ ಮಾನಸಿಕ ಸ್ಥಿತಿಯನ್ನು ಅನುಭವಿಸುತ್ತಿದ್ದರು. ರಮಝಾನ್ ತಿಂಗಳು ಪ್ರವಾದಿಯವರಿಗೆ(ಸ) ಪ್ರವಾದಿತ್ವ ದೊರೆತ ತಿಂಗಳು ಮತ್ತು ಕುರ್‌ಆನ್ ಅವತೀರ್ಣಗೊಂಡ ತಿಂಗಳಾದ್ದರಿಂದ ಹಾಗೂ ರಮಝಾನ್‌ನ ಇನ್ನಿತರ ಅನುಗ್ರಹಗಳಿಗಾಗಿ 'ರಮಝಾನ್'ನ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಇದಲ್ಲದೇ ಶಅಬಾನ್ ತಿಂಗಳಲ್ಲಿ ಹೆಚ್ಚೆಚ್ಚು ದೇವಸಾಮಿಪ್ಯ ಪಡೆಯಲು ಐಚ್ಛಿಕ ಆರಾಧನೆಗಳನ್ನು ನಿರ್ವಹಿಸುತ್ತಿದ್ದರು.

ಹ. ಆಯಿಶಾ ಮತ್ತು ಹ. ಉಮ್ಮು ಸಲಮ(ರ) ವರದಿ ಮಾಡಿರುವಂತೆ ಪ್ರವಾದಿ ಮುಹಮ್ಮದ್(ಸ) ರಮಝಾನ್‌ನ ಹೊರತು ಶಅಬಾನ್ ತಿಂಗಳಲ್ಲಿ ಅತ್ಯಧಿಕ ಉಪವಾಸಗಳನ್ನಾಚರಿಸುತ್ತಿದ್ದರು. ಆದರೆ ಇದು ಅವರ ವೈಯಕ್ತಿಕ ಆರಾಧನೆಯಾಗಿತ್ತು. 'ಪ್ರವಾದಿ(ಸ) ತಮ್ಮ ಸಮುದಾಯಕ್ಕೆ ಶಅಬಾನ್ ಕೊನೆಯ 15 ದಿನಗಳಲ್ಲಿ ಉಪವಾಸ ಆಚರಿಸದಿರಲು ಉಪದೇಶಿಸಿದರು. ಏಕೆಂದರೆ ಜನರು ಈ ಸಮಯದಲ್ಲಿ ಉಪವಾಸಗಳನ್ನಾಚರಿಸಿದರೆ, ರಮಝಾನಿನ ಕಡ್ಡಾಯ(ಫರ್ಝ್) ಉಪವಾಸಗಳ ಮೇಲೆ ಪ್ರತಿಕೂಲ ಪರಿಣಾಮವಾಗಬಹುದು ಅಥವಾ ಈ ರೀತಿ ಉಪವಾಸ ಆಚರಿಸುವ ಪದ್ಧತಿ ಬೆಳೆದುಕೊಂಡು ಬರಬಹುದೆಂಬ ಶಂಕೆ ಅವರಿಗಿತ್ತು. ಇದರಿಂದಾಗಿ ಜನರಿಗೆ ಅಲ್ಲಾಹನು ಆದೇಶಿಸಿದ

ಕಡ್ಡಾಯ ಉಪವಾಸ ಗಳಿಗಿಂತ 10-15 ಉಪವಾಸಗಳ ಹೆಚ್ಚಿನ ಭಾರ ಬೀಳಬಹುದೆಂಬ ಮುಂದಾಲೋಚನೆಯಿತ್ತು.

ಆದರೆ ಶಅಬಾನ್ ತಿಂಗಳ 15ನೆಯ ತಾರೀಕಿನಂದು ಆಚರಿಸಲಾಗುವ ಜಾಗರಣೆ, ಸಂಭ್ರಮ, ಸಡಗರ, ಭಕ್ಷ್ಯ-ಭೋಜನ ಇತ್ಯಾದಿಗಳಿಗೆ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯಲ್ಲಿ ಯಾವುದೇ ಆಧಾರವಿಲ್ಲ.

ಮುಸ್ಲಿಮರಿಗೆ ಇಸ್ಲಾಮೇತರ ಆಚರಣೆಗಳಿಂದ ದೂರವಿರುವಂತೆ ಆದೇಶಿಸಲಾಗಿದೆ. ಎಷ್ಟೇ ಸದುದ್ದೇಶದಿಂದ ಪ್ರಾರಂಭಿಸಲಾದ ಆಚರಣೆಗಳಾಗಲೀ, ಆರಾಧನೆಗಳಾಗಲೀ 'ಕಡ್ಡಾಯ'ದ ಮಟ್ಟಕ್ಕೆ ತಲುಪಬಾರದು. ಒಂದು ವೇಳೆ ಸ್ವಯಂಕೃತ ಆಚರಣೆಗಳು 'ಕಡ್ಡಾಯ'ವನ್ನು ಮೀರಿ ಬೆಳೆದರೆ ಅವುಗಳ ಆಚರಣೆಯ ಅನವಶ್ಯಕ ಭಾರವನ್ನು ಇಚ್ಛೆಯಿಂದ ಹೇರಿ ಕೊಂಡಂತಾಗುತ್ತದೆ. ಇದರಿಂದ ದೂರಗಾಮಿ ಪರಿಣಾಮಗಳನ್ನು ಅನುಭವಿಸ ಬೇಕಾಗುತ್ತದೆ. ಆದ್ದರಿಂದ ಅಲ್ಲಾಹನಿಂದ ನಿಶ್ಚಯಿಸಲ್ಪಟ್ಟ ಕಡ್ಡಾಯಗಳಲ್ಲಿ ಯಾವುದನ್ನೂ ಕಡಿತಗೊಳಿಸುವ ಸ್ವಾತಂತ್ರ್ಯವನ್ನು ಮನುಷ್ಯನಿಗೆ ನೀಡದಿರುವಂತೆಯೇ ಅವುಗಳನ್ನು ಸ್ವ ಇಚ್ಛೆಯಿಂದ ಹೆಚ್ಚಿಸುವ ಸ್ವಾತಂತ್ರ್ಯವನ್ನೂ ನೀಡಲಾಗಿಲ್ಲ.

ಕುರ್‌ಆನಿನ ದೈವಿಕ ಆದೇಶಗಳನ್ನು ಯಥಾವತ್ತಾಗಿ ಹೇಗೆ ಪಾಲಿಸಬೇಕೆಂಬುದಕ್ಕೆ ಪ್ರವಾದಿ ಮುಹಮ್ಮದರ(ಸ) ಜೀವನವೇ ಮಾದರಿ. ಇದರ ಹೊರತು ಕುರ್‌ಆನನ್ನು ಇನ್ನಾವ ರೀತಿಯಿಂದಲೂ ವ್ಯಾಖ್ಯಾನಿಸುವುದು ಸಮ್ಮತವಲ್ಲ. ಪ್ರವಾದಿಚರ್ಯೆಯಲ್ಲಿ ಸಮುದಾಯದ ತರಬೇತಿಯ ದೂರಗಾಮಿ ದೃಷ್ಟಿಯೂ ಅಡಗಿದೆ. ಇದಕ್ಕೆ ಹೋಲಿಕೆ ಯಾಗಿ ಅನೇಕ ಮಹಾನ್ ಮುಸ್ಲಿಮ್ ವಿದ್ವಾಂಸರ ಜೀವನವನ್ನು ಅಭ್ಯಸಿಸಿದಲ್ಲಿ ತಿಳಿಯುವುದೇನೆಂದರೆ, ಅವರು ಒಳ್ಳೆಯ ಉದ್ದೇಶದಿಂದಲೇ ಪ್ರಾರಂಭಿಸಿದ ಅನೇಕ ತರಬೇತಿ ಕಾರ್ಯಕ್ರಮಗಳು ಕಾಲಕ್ರಮೇಣ ಡಾಂಬಿಕ ಆಚರಣೆಗಳಾಗಿ ಮಾರ್ಪಟ್ಟು ಸಮುದಾಯಕ್ಕೆ ಶಾಪದ ರೂಪದಲ್ಲಿ ಅಂಟಿಕೊಂಡವು.

'ಉಮ್ಮುಲ್ ಮೂಮಿನೀನ್'(ಸತ್ಯವಿಶ್ವಾಸಿಗಳ ಮಾತೆ) ಹ. ಆಯಿಶಾ(ರ) ಹೇಳುತ್ತಾರೆ, ಪ್ರವಾದಿ ಮುಹಮ್ಮದ್(ಸ) ಹೇಳಿದರು- "ಯಾರಾದರೂ ನಮ್ಮ ಈ ಧರ್ಮದಲ್ಲಿಲ್ಲದ ನವೀನ ಆಚಾರವನ್ನು ಆರಂಭಿಸಿದರೆ ಅದು ತಿರಸ್ಕಾರ ಯೋಗ್ಯವಾಗಿದೆ."

(ಬುಖಾರಿ, ಮುಸ್ಲಿಮ್)

ಶಬೆ ಬರಾತ್‌ನ ಈ ರೀತಿಯ ಆಚರಣೆಗಳಿಗೆ ಯಾವುದೇ ಆಧಾರವಿಲ್ಲ. ಕೇವಲ ಒಂದು ಘಟನೆ ಶಅಬಾನ್ 15ರ ರಾತ್ರಿಯಂದು ನಡೆಯಿತು. ಹ. ಆಯಿಶಾರವರು(ರ) ಪ್ರವಾದಿ ಮುಹಮ್ಮದರನ್ನು(ಸ) ಹಾಸಿಗೆಯಲ್ಲಿ ಕಾಣದಿರಲು ಅವರನ್ನು ಹುಡುಕುತ್ತಾ 'ಜನ್ನತುಲ್ ಬಕೀಅ್' ಎನ್ನುವ ಕಬರಸ್ಥಾನಕ್ಕೆ ಬಂದರು. ಅಲ್ಲಿ ಅವರನ್ನು ಕಂಡು ಪ್ರಶ್ನಿಸಿದಾಗ, ಅವರು ಈ ರಾತ್ರಿಯಂದು ಅಲ್ಲಾಹನು ತನ್ನ ಗಮನವನ್ನು ಆಕಾಶದಿಂದ ಭೂಮಿಯ ಕಡೆಗೆ ಹರಿಸುತ್ತಾನೆ ಮತ್ತು 'ಕಲ್ಬ್' ಎಂಬ ತಳಿಯ ಎಲ್ಲ ಆಡುಗಳ ಒಟ್ಟು ರೋಮಗಳಷ್ಟು ಪಾಪಗಳನ್ನು ಕ್ಷಮಿಸುತ್ತಾನೆ ಎಂದರು. ಈ ಹದೀಸನ್ನು ಪ್ರಖ್ಯಾತ

ಹದೀಸ್ ವಿದ್ವಾಂಸ ಇಮಾಮ್ ತಿರ್ಮಿದಿಯವರು 'ದುರ್ಬಲ' ಎಂದಿರುವರು. ಈ ಘಟನೆಯನ್ನು ಹದೀಸ್‌ನ ಯಾವುದೇ ಅಧಿಕೃತ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿಲ್ಲ, ಹೆಚ್ಚೆಂದರೆ ವ್ಯಕ್ತಿಗತವಾಗಿ ಪಾಪವಿಮೋಚನೆಗಾಗಿ ಪ್ರಾರ್ಥಿಸಬಹುದೇ ಹೊರತು ಶಅಬಾನ್ 14 ಅಥವಾ 15ರ ರಾತ್ರಿಯನ್ನು ಹಬ್ಬವೆಂದಾಗಲೀ ಸಾಮೂಹಿಕ ಪ್ರಾರ್ಥನಾ ದಿನವೆಂದಾಗಲೀ ಮಾಡುವುದು ಸಲ್ಲದು ಎಂಬುದಂತೂ ಸ್ಪಷ್ಟ.

❑ ❑ ❑

ಲೈಲತುಲ್ ಕದ್ರ್

'ಲೈಲತುಲ್ ಕದ್ರ್' ಕುರ್‌ಆನ್ ಅವತೀರ್ಣಗೊಂಡ ರಾತ್ರಿಯಾಗಿದೆ.

"ನಾವು ಈ ಕುರ್‌ಆನನ್ನು 'ಕದ್ರ್'ನ ರಾತ್ರಿಯಲ್ಲಿ ಅವತೀರ್ಣಗೊಳಿಸಿರುವೆವು. 'ಕದ್ರ್'ನ ರಾತ್ರಿ ಏನೆಂದು ನಿಮಗೇನು ಗೊತ್ತು? 'ಕದ್ರ್'ನ ರಾತ್ರಿಯು ಸಾವಿರ ಮಾಸಗಳಿಗಿಂತಲೂ ಹೆಚ್ಚು ಶ್ರೇಷ್ಠವಾಗಿದೆ. ದೇವಚರರು ಮತ್ತು 'ರೂಹ್' ಆ ರಾತ್ರಿ ತಮ್ಮ ಪ್ರಭುವಿನ ಅನುಜ್ಞೆಯಿಂದ ಪ್ರತಿಯೊಂದು ಆದೇಶದೊಂದಿಗೆ ಇಳಿಯುತ್ತಾರೆ. ಆ ರಾತ್ರಿಯು ಅರುಣೋದಯದವರೆಗೂ ಸಾದ್ಯಂತ ಮಂಗಳಮಯವಾಗಿದೆ."

(ಪವಿತ್ರ ಕುರ್‌ಆನ್, 97:1-5)

ಕುರ್‌ಆನಿನ ಇನ್ನೊಂದು ಅಧ್ಯಾಯದಲ್ಲಿ, "ನಾವು ಈ ಕುರ್‌ಆನನ್ನು ಒಂದು ಸುಮಂಗಳ ರಾತ್ರಿಯಲ್ಲಿ ಇಳಿಸಿದ್ದೇವೆ. ಏಕೆಂದರೆ ನಾವು ಜನರನ್ನು ಎಚ್ಚರಗೊಳಿಸುವವರಾಗಿದ್ದೇವೆ. ಅದು ಎಲ್ಲ ವ್ಯವಹಾರಗಳ ಬಗ್ಗೆ ಯುಕ್ತಿಪೂರ್ಣವಾದ ತೀರ್ಮಾನ ನಮ್ಮ ಆದೇಶದಂತೆ ಜಾರಿಗೊಳ್ಳುವ ರಾತ್ರಿಯಾಗಿದೆ." (ಪವಿತ್ರ ಕುರ್‌ಆನ್, 44:3-4)

'ಕದ್ರ್'ನ ರಾತ್ರಿ(ಪ್ರತಿಷ್ಠಿತ ರಾತ್ರಿ)ಯು ರಮಝಾನ್ ತಿಂಗಳ ಒಂದು ರಾತ್ರಿಯೆಂಬುದಂತೂ ಕುರ್‌ಆನಿನ ಮೂಲಕ ಸ್ಪಷ್ಟಪಡಿಸಲಾಗಿದೆ. ಆದರೆ 'ಲೈಲತುಲ್ ಕದ್ರ'ನ್ನು ನಿರ್ದಿಷ್ಟವಾಗಿ ರಮಝಾನಿನ ಯಾವ ರಾತ್ರಿ ಎಂದು ತಿಳಿಸದೇ ಇರುವುದು, ಆ ರಾತ್ರಿಯ ಅನ್ವೇಷಣೆಯಲ್ಲಿ ಜನರು ಹೆಚ್ಚು ಹೆಚ್ಚು ಆರಾಧನೆಗಳಲ್ಲಿ ತಲ್ಲೀನರಾಗಿ ಪುಣ್ಯ ಸಂಪಾದಿಸಲಿ ಎಂದಾಗಿರಬಹುದು. ಆದರೆ ಪ್ರವಾದಿ ವಚನಗಳ ಮೂಲಕ 'ಕದ್ರ್'ನ ರಾತ್ರಿಯ ಕುರಿತು ಇನ್ನಷ್ಟು ಸ್ಪಷ್ಟ ವಿವರಣೆ ದೊರೆಯುತ್ತದೆ. ಅದು ರಮಝಾನ್ ತಿಂಗಳ ಕೊನೆಯ ದಶದಿನಗಳ ಬೆಸ ಸಂಖ್ಯೆಯ ರಾತ್ರಿಗಳ ಪೈಕಿ ಒಂದು ರಾತ್ರಿಯಾಗಿದೆ. ಹ. ಆಯಿಶಾರ(ರ) ವರದಿಯಂತೆ ಪ್ರವಾದಿ(ಸ) ಹೇಳಿರುವರು, "ಕದ್ರ್‌ನ ರಾತ್ರಿಯನ್ನು ರಮಝಾನ್ ತಿಂಗಳ ಕೊನೆಯ ದಶ ದಿನಗಳ ಬೆಸ ಸಂಖ್ಯೆಯ ರಾತ್ರಿಗಳಲ್ಲಿ ಹುಡುಕಿರಿ" (ಬುಖಾರಿ). ಅಂದರೆ ರಮಝಾನ್ ತಿಂಗಳ 21, 23, 25, 27 ಮತ್ತು 29ನೆಯ ರಾತ್ರಿಗಳ ಪೈಕಿ ಯಾವುದಾದರೊಂದು ರಾತ್ರಿಯು ಕದ್ರ್‌ನ ರಾತ್ರಿಯಾಗಿದೆ. ಈ ರಾತ್ರಿಯು ಅತ್ಯಂತ ಶ್ರೇಷ್ಠ ಹಾಗೂ

ಪಾವನವಾಗಿದ್ದು ಅದರಲ್ಲಿ ದೇವಚರರು ಮತ್ತು 'ರೂಹುಲ್ ಅಮೀನ್' (ಹ. ಜಿಬ್ರೀಲ್) ಧರೆಗಿಳಿದು ಬರುತ್ತಾರೆ ಹಾಗೂ ನಿಂತೋ ಕುಳಿತೋ ದಿಕ್ರ್ ಮತ್ತು ಆರಾಧನೆಯಲ್ಲಿ ನಿರತನಾಗಿರುವವರಿಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಾರೆ (ಅಲ್ ಬೈಹಕಿ). ಆದ್ದರಿಂದ ಈ ಕೊನೆಯ 5 ಬೆಸ ಸಂಖ್ಯೆಯ ರಾತ್ರಿಗಳಲ್ಲಿ ಮುಸ್ಲಿಮರು ಅತ್ಯಂತ ಹೆಚ್ಚು ಆರಾಧನೆ ಮತ್ತು ದೇವಸ್ಮರಣೆಯನ್ನು ಮಾಡುತ್ತಾ ಈ ರಾತ್ರಿಯಲ್ಲಿ ಪ್ರವಾದಿ ಮುಹಮ್ಮದರು(ಸ) ಕಲಿಸಿರುವ ಪ್ರಾರ್ಥನೆ, "ಅಲ್ಲಾಹುಮ್ಮ ಇನ್ನಕ ಅಫುವ್ವುನ್ ತುಹಿಬ್ಬುಲ್ ಅಫ್‌ವ ಫಅ್‌ಫುಅನ್ನೀ" ಅರ್ಥಾತ್-ಓ ಅಲ್ಲಾಹ್! ನೀನು ಅತಿದೊಡ್ಡ ಕ್ಷಮಾಶೀಲನಾಗಿರುವಿ. ಕ್ಷಮಿಸುವುದು ನಿನಗೆ ಬಹಳ ಪ್ರಿಯವಾದ ಕಾರ್ಯ, ಆದ್ದರಿಂದ ನನ್ನನ್ನು ಕ್ಷಮಿಸಿ ಬಿಡು. (ತಿರ್ಮಿದಿ, ಇಬ್ನುಮಾಜಃ, ಅಹ್ಮದ್ ಬಿನ್ ಹಂಬಲ್)

ಈ ವಿಷಯದಲ್ಲಿ ಉಂಟಾಗುವ ಸಂಶಯವೇನೆಂದರೆ, 'ಪವಿತ್ರ ಮಕ್ಕಾ ಪಟ್ಟಣದಲ್ಲಿ, ರಾತ್ರಿಯಾಗಿರುವಾಗ ಜಗತ್ತಿನ ಉಳಿದ ಬಹು ದೊಡ್ಡ ಭಾಗದಲ್ಲಿ ಹಗಲಾಗಿರುತ್ತದೆ, ಆದ್ದರಿಂದ ಆ ಪ್ರದೇಶಗಳ ಜನರಿಗೆ, 'ಕದ್ರ್'ನ ರಾತ್ರಿಯು ಲಭಿಸುವುದಿಲ್ಲವಲ್ಲ' ಎಂದು. ನಾವು 'ದಿನ' ಎಂದರೆ ಹಗಲು ಮತ್ತು ರಾತ್ರಿ ಎರಡಕ್ಕೂ ಸೇರಿಸಿ ಹೇಳುವಂತೆ ಅರಬಿ ಭಾಷೆಯಲ್ಲಿ ಹೆಚ್ಚಾಗಿ ರಾತ್ರಿ ಎಂಬ ಪದವನ್ನು 'ಹಗಲು' ಮತ್ತು 'ರಾತ್ರಿ' ಎರಡಕ್ಕೂ ಒಟ್ಟಾಗಿ ಹೇಳಲಾಗುತ್ತದೆ. ಆದ್ದರಿಂದ ರಮಝಾನಿನ ಈ ದಿನಾಂಕಗಳಲ್ಲಿ ಯಾವುದೇ ದಿನಾಂಕವು, ಯಾವುದೇ ಭೂಭಾಗದಲ್ಲಿದ್ದರೂ, ಆ ಹಗಲಿಗಿಂತ ಮುಂಚಿನ ರಾತ್ರಿಯು ಆ ಪ್ರದೇಶದವರ ಮಟ್ಟಿಗೆ 'ಕದ್ರ್'ನ ರಾತ್ರಿಯಾಗಿರುತ್ತದೆ.

ಪ್ರತಿಯೊಂದು ಮಸೀದಿಯಲ್ಲಿ ರಮಝಾನಿನ ಈ ಕೊನೆಯ ಹತ್ತು ದಿನಗಳ ಐದು ಬೆಸ ಸಂಖ್ಯೆಯ ರಾತ್ರಿಗಳಲ್ಲಿ ಜಾಗರಣೆ ಮಾಡುತ್ತಾ, ನಮಾಝ್ ಮಾಡುವವರಿಗಾಗಿ, 'ದಿಕ್ರ್' ಮಾಡುವವರಿಗಾಗಿ, ವಿಶೇಷ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಕೆಲವೊಮ್ಮೆ ಇಡೀ ರಾತ್ರಿ ಜಾಗರಣೆ ಮಾಡುವವರ ಅನುಕೂಲಕ್ಕಾಗಿ ಅಂದು ರಾತ್ರೆಯ ಸಹ್ರೀಯ ವ್ಯವಸ್ಥೆಯನ್ನು ಮಾಡುವುದುಂಟು. ವಿಶೇಷವಾಗಿ 27ನೆಯ ರಾತ್ರಿಯಲ್ಲಿ ಕೆಲವು ಮಸೀದಿಗಳಲ್ಲಿ ಧಾರ್ಮಿಕ ವಿದ್ವಾಂಸರನ್ನು ಕರೆಯಿಸಿ ಪ್ರವಚನಗಳನ್ನು ಇರಿಸುವುದುಂಟು. ಪುರುಷರು ರಾತ್ರಿಯ ಹೆಚ್ಚಿನ ಸಮಯವನ್ನು ಮಸೀದಿಗಳಲ್ಲಿ ಕಳೆದರೆ ಮಹಿಳೆಯರು, ಮಕ್ಕಳು ಮನೆಯಲ್ಲಿ ಜಾಗರಣೆ ಮಾಡುತ್ತಿರುತ್ತಾರೆ. ಇನ್ನು 'ಇಅ್‌ತಿಕಾಫ್'(ತಪಶ್ಚರ್ಯೆ) ಕುಳಿತಿರುವವರಿಗಂತೂ 5 ರಾತ್ರಿಗಳಲ್ಲಿ ಸತತವಾಗಿ ದೇವಸ್ಮರಣೆಯ ಅವಕಾಶ ಹಾಗೂ ಪುಣ್ಯ ಲಭಿಸುತ್ತದೆ.

ರಮಝಾನ್‌ನ ಕೊನೆಯ 5 ಬೆಸ ಸಂಖ್ಯೆಯ ರಾತ್ರಿಗಳಿಗೆ ಆರಾಧನೆಯ ದೃಷ್ಟಿಯಿಂದ ಅತ್ಯಂತ ಹೆಚ್ಚಿನ ಮಹತ್ವ ನೀಡಬೇಕೇ ಹೊರತು, ಯಾವುದೇ ಒಂದು ಬೆಸ ಸಂಖ್ಯೆಯ ರಾತ್ರಿಯನ್ನು 'ಕದ್ರ್‌ನ ರಾತ್ರಿ' ಎಂದು ಪರಿಗಣಿಸಿ ಹಬ್ಬದ ಪ್ರಮಾಣದಲ್ಲಿ ಆಚರಿಸುವುದು ಪ್ರವಾದಿಚರ್ಯೆಯಿಂದ ಸಾಬೀತಾಗಿಲ್ಲ.

❑ ❑ ❑

ಈದುಲ್ ಫಿತ್ರ್

ಒಂದು ತಿಂಗಳ ಸತತ ಉಪವಾಸದ ನಂತರ 'ಶವ್ವಾಲ್' ತಿಂಗಳ 1ನೆಯ ತಾರೀಕಿನಂದು ಆಚರಿಸಲಾಗುವ ಹಬ್ಬವಿದು. ತಿಂಗಳಿಡೀ ಸತ್ಕರ್ಮಗಳೆಸಗಿ, ಪುಣ್ಯ ಸಂಪಾದನೆಗಾಗಿ ದುಡಿದು, ಈ ಹಬ್ಬದಂದು ಅದರ ಮಜೂರಿ ಅಥವಾ ಪ್ರತಿಫಲವನ್ನು ಪಡೆಯುವ ಸಮಯವದು. ರಮಝಾನ್ ತಿಂಗಳ ಉಪವಾಸ ಆಚರಿಸದವರು ಈ ಹಬ್ಬದ ಆನಂದವನ್ನು ಅನುಭವಿಸಲಸಾಧ್ಯ.

ಈ ಹಬ್ಬದ ಸಮಯದಲ್ಲಿ ನೀಡಲಾಗುವ 'ಫಿತ್ರ'ಕ್ಕೆ ಸಂಬಂಧಿಸಿದಂತೆ 'ಈದುಲ್ ಫಿತ್ರ್' ಎಂಬ ಹೆಸರು ಬಂದಿದೆ. ಹಬ್ಬದ ನಮಾಝ್‌ಗಿಂತ ಮುಂಚಿತವಾಗಿ ಬಡ ಬಗ್ಗರಿಗೆ ನೀಡಲಾಗುವ 'ಫಿತ್ರ' ಎಂಬ ದಾನವನ್ನು ಉಪವಾಸದ ಸಮಯದಲ್ಲಿ ಅನೈಚ್ಛಿಕವಾಗಿ ಸಂಭವಿಸಿದ ತಪ್ಪುಗಳ ಪ್ರಾಯಶ್ಚಿತ್ತವೆಂದು ತಿಳಿಯಲಾಗುತ್ತದೆ. 'ಈದುಲ್ ಫಿತ್ರ್'ನ್ನು ಜನಸಾಮಾನ್ಯರು 'ರಮಝಾನ್ ಹಬ್ಬ' ಎಂತಲೂ ಕರೆಯುವುದುಂಟು. ರಮಝಾನ್ ತಿಂಗಳ ವೈಶಿಷ್ಟ್ಯಗಳ ಮೇಲೆ ಕಣ್ಣೋಟ ಹರಿಸದೆ ಈ ಹಬ್ಬದ ಸ್ಫೂರ್ತಿಯನ್ನು ಅರ್ಥೈಸಲು ಸಾಧ್ಯವಿಲ್ಲ.

ಉಪವಾಸ ವ್ರತ

"ಓ ಸತ್ಯವಿಶ್ವಾಸಿಗಳೇ, ಗತ ಪ್ರವಾದಿಗಳ ಅನುಯಾಯಿಗಳಿಗೆ ಕಡ್ಡಾಯಗೊಳಿಸಿದ್ದಂತೆಯೇ ನಿಮ್ಮ ಮೇಲೂ ಉಪವಾಸ ವ್ರತವನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ನಿಮ್ಮಲ್ಲಿ 'ತಕ್ವಾ'(ಧರ್ಮನಿಷ್ಠೆ)ದ ಗುಣವಿಶೇಷವುಂಟಾಗುವುದೆಂದು ಆಶಿಸಲಾಗಿದೆ."

(ಪವಿತ್ರ ಕುರ್‌ಆನ್, 2:183)

ಉಪವಾಸಕ್ಕೆ ಅರಬಿ ಭಾಷೆಯಲ್ಲಿ 'ಸೌಮ್' ಎಂದು ಹೇಳುತ್ತಾರೆ. ಅದಕ್ಕೆ 'ತಡೆಹಿಡಿಯು', 'ನಿಯಂತ್ರಿಸು' ಎಂಬ ಅರ್ಥಗಳಿವೆ. ಮಾನವನ ಪ್ರಮುಖ ಇಚ್ಛೆಗಳ ನಿಯಂತ್ರಣದ ತರಬೇತಿಯೇ ಉಪವಾಸ.

ಉಪವಾಸದಿಂದ ಆಧ್ಯಾತ್ಮದೆಡೆಗೆ ಸರಿಯುವ, ಸೃಷ್ಟಿಕರ್ತನಿಗೆ ಹತ್ತಿರವಾಗುವ ಕಲ್ಪನೆಯು ಅತ್ಯಂತ ಮಹತ್ತರವಾದದ್ದು. ಸಿಪಾಯಿಯೊಬ್ಬನು ತನ್ನ ಸೇನಾಧಿಕಾರಿಯ ಆದೇಶಗಳನ್ನು ಶಿಸ್ತಿನಿಂದ ಪಾಲಿಸುವ ಹಾಗೆ, ಅಲ್ಲಾಹನು ನಿರ್ಧರಿಸಿದ ಸಮಯಕ್ಕೆ, ಕೊರೆಯುವ ಚಳಿಯಲ್ಲಿ, ಅಪರಾತ್ರಿಯಲ್ಲಿ, ಸಿಹಿನಿದ್ರೆಯಿಂದ ಎದ್ದು ಸಾಮಾನ್ಯ ದಿನಗಳಲ್ಲಿ

ಮೃಷ್ಟಾನ್ನ ಭೋಜನ ನೀಡಿದರೂ ತಿನ್ನದಿರುವಂತಹ ಸಮಯದಲ್ಲಿ ಎದ್ದು ಸಹ್ರೀಯನ್ನು ಸೇವಿಸುವುದು. ದಿನವಿಡೀ ಅನ್ನಾಹಾರಗಳನ್ನು, ಲೈಂಗಿಕ ಕ್ರಿಯೆಗಳನ್ನು ವರ್ಜಿಸುವುದಲ್ಲದೇ ಸುಳ್ಳು, ಕಪಟ, ಮೋಸ, ವಂಚನೆ, ಚಾಡಿ, ಕಳವು ಇತ್ಯಾದಿಗಳಿಂದ ದೂರವಿರುವುದನ್ನು ಸರಿಯಾಗಿ ಪಾಲಿಸಿದಾಗ ಸತ್ಯವಿಶ್ವಾಸಿಯು ದೇವಚರರ ಮಟ್ಟಕ್ಕೆ ತಲಪುತ್ತಾನೆ. ಆದ್ದರಿಂದಲೇ ಉಪವಾಸವನ್ನು ಕೇವಲ ಹೊಟ್ಟೆಯ ಉಪವಾಸವಲ್ಲ, ಬದಲಿಗೆ 'ಅಂಗಾಂಗಗಳ ಉಪವಾಸ' ಎಂದು ಕರೆಯಲಾಗಿದೆ.

ಉಪವಾಸವು ಸಹನೆ ಮತ್ತು ತಾಳ್ಮೆಯ ಪಾಠವನ್ನು ನೀಡುತ್ತದೆ. ಅನುಕಂಪ ಹಾಗೂ ಮಾನವೀಯತೆಯನ್ನು ಕಲಿಸುತ್ತದೆ. ಉಪವಾಸದಿಂದ ಮುಸ್ಲಿಮನು ಕೃತಜ್ಞತೆ, ವಿನಮ್ರತೆ ಹಾಗೂ ದಾಸ್ಯಭಾವನೆಯನ್ನು ಕಲಿಯುತ್ತಾನೆ.

"ಸುಳ್ಳು ಮಾತು ಮತ್ತು ವರ್ತನೆಗಳನ್ನು ತೊರೆಯದವರು, ಆಹಾರ ಪಾನೀಯವನ್ನು ತೊರೆಯಬೇಕಾದ ಯಾವ ಅಗತ್ಯವೂ ಅಲ್ಲಾಹನಿಗಿಲ್ಲ." (ಬುಖಾರಿ)

ಹಸಿವನ್ನು ಅನುಭವಿಸಿದವನಿಗೆ ಮಾತ್ರ ಹಸಿದವನ ಕಷ್ಟವನ್ನರಿಯಲು ಸಾಧ್ಯ. ಇಂತಹ ಅನುಭವವಿಲ್ಲದೇ ಪಂಚತಾರಾ ಹೊಟೇಲುಗಳಲ್ಲಿ ಹೆಸರಾಂತ ಸಮಾಜ ಸೇವಾ ಕಾರ್ಯಕರ್ತರು ಹಸಿವು, ಬಡತನ ನಿವಾರಣೆಗಾಗಿ ನಡೆಸುವ ಸಮ್ಮೇಳನ, ವಿಚಾರ ಸಂಕಿರಣಗಳು ಕೇವಲ ಬಾಯಿ ಮಾತಿನ ಉಪಚಾರ (Lip service) ಸಲ್ಲಿಸುತ್ತವೆ. ಜಗತ್ತಿನ ಸಕಲ ಅಪರಾಧಗಳ ಬೇರನ್ನು ತಡಕಿದಾಗ ಸಿಗುವುದು ಊಟ, ಬಟ್ಟೆಯ ಕೊರತೆ ಹಾಗೂ ಲೈಂಗಿಕ ತೃಷೆ. ಈ ಜೀವನಾವಶ್ಯಕತೆಗಳನ್ನೇ ಸನ್ಮಾರ್ಗದ ಮೂಲಕ ಪಡೆಯುವ, ಅವಶ್ಯವಿದ್ದಷ್ಟೇ ಬಳಸುವ, ತನಗಿಂತ ಕಡಿಮೆ ಸ್ತರದ ಜನರ (Less fortunate)ಮೇಲೆ ಖರ್ಚು ಮಾಡುವ, ಅವರನ್ನು ಗೌರವಿಸುವ, ಪ್ರೀತಿಸುವ, ತನ್ಮೂಲಕ ಸಮಾಜದಲ್ಲಿ ಶಾಂತಿಯನ್ನು ಹರಡುವ ಶಿಕ್ಷಣವನ್ನು ಉಪವಾಸದಿಂದ ನೀಡಲಾಗುತ್ತದೆ. ಗುಪ್ತವಾಗಿಯೂ ಬಹಿರಂಗವಾಗಿಯೂ ಅಲ್ಲಾಹನಿಗೆ ಭಯಪಡ ಬೇಕೆಂಬ ತರಬೇತಿ, ಜೀವನದಲ್ಲಿ ಸಮಯದ ಬೆಲೆ, ಶಿಸ್ತು, ದಾನ-ಧರ್ಮಗಳಿಗೆ ಪ್ರೇರಣೆ, ದಯೆ, ದುಷ್ಟ ಮನೋವಿಕೃತಿಗಳಿಗೆ ತಡೆ ಹಾಗೂ ದೇವಭಯ(ತಕ್ವಾ)ವನ್ನು ಉಂಟು ಮಾಡುವುದು ಉಪವಾಸದ ನಿಜವಾದ ಉದ್ದೇಶವಾಗಿದೆ.

ಉಪವಾಸ ಪಾರಣೆ ಮಾಡಿಸಿ ಪುಣ್ಯ ಗಳಿಸಲು ಈ ತಿಂಗಳಲ್ಲಿ ಅನೇಕ ಸಲ ಸಾಮೂಹಿಕ ಉಪವಾಸ ಪಾರಣೆ ಮತ್ತು ಸಾಮೂಹಿಕ ಅತ್ತಾಳ(ಸಹ್ರೀ) ಸೇವನೆಯನ್ನು ಮಸೀದಿ ಅಥವಾ ಇನ್ನಿತರ ಕಡೆ ಏರ್ಪಾಡು ಮಾಡಲಾಗುತ್ತದೆ. ವಿಶೇಷವಾಗಿ ರಮಝಾನ್ ತಿಂಗಳ ಕೊನೆಯ ಹತ್ತು ದಿನಗಳಲ್ಲಂತೂ ಸತತವಾಗಿ ಇಂತಹ ಕಾರ್ಯಕ್ರಮಗಳನ್ನು ವ್ಯವಸ್ಥಿತಗೊಳಿಸಲಾಗಿರುತ್ತದೆ.

ರಮಝಾನ್‌ನ ವೈಶಿಷ್ಟ್ಯವನ್ನು ಈ ಪ್ರವಾದಿ ವಚನವೊಂದರಿಂದ ಗ್ರಹಿಸಬಹುದು. ಹ. ಸಲ್ಮಾನ್ ಫಾರ್ಸಿ(ರ) ಹೀಗೆ ವರದಿ ಮಾಡಿರುವರು, ಅದೊಂದು ಶಅಬಾನ್ ತಿಂಗಳ ಕೊನೆಯ ದಿನ ಪ್ರವಾದಿವರ್ಯರು(ಸ) ಭಾಷಣ ಮಾಡುತ್ತಾ ನಮ್ಮೊಡನೆ ಹೀಗೆ

ಹೇಳಿದರು, "ಓ ಜನರೇ! ನಿಶ್ಚಯವಾಗಿಯೂ ಒಂದು ಶ್ರೇಷ್ಠ ತಿಂಗಳು ನಿಮ್ಮ ಮೇಲೆ ನೆರಳು ಮಾಡಿದೆ. ಅನುಗ್ರಹೀತ ತಿಂಗಳು. ಅದರಲ್ಲೊಂದು ರಾತ್ರಿಯಿದೆ, ಅದು ಸಾವಿರ ತಿಂಗಳಿಗಿಂತ ಪುಣ್ಯದಾಯಕವಾಗಿದೆ. ಆ ತಿಂಗಳ (ಹಗಲುಗಳಲ್ಲಿ) ಉಪವಾಸವನ್ನು ಅಲ್ಲಾಹನು ಕಡ್ಡಾಯಗೊಳಿಸಿದ್ದಾನೆ. ರಾತ್ರಿ ನಮಾಝನ್ನು 'ನಫಿಲ್' (ಐಚ್ಛಿಕ) ಆಗಿ ಮಾಡಿದ್ದಾನೆ. ಆ ತಿಂಗಳಲ್ಲಿ ದೇವಸಂಪ್ರೀತಿಗಾಗಿ ಒಂದು ಐಚ್ಛಿಕ ಸತ್ಕರ್ಮವನ್ನು ನಿರ್ವಹಿಸಿದಾತನು ಇತರ ಕಾಲಗಳಲ್ಲಿ ಒಂದು ಕಡ್ಡಾಯ ಕರ್ಮವನ್ನು ನಿರ್ವಹಿಸಿದಂತೆ. ಹಾಗೆಯೇ ಅದರಲ್ಲಿ ಒಂದು ಕಡ್ಡಾಯ ಕರ್ಮವನ್ನು ನಿರ್ವಹಿಸಿದಾತನು, ಇತರ ದಿನಗಳಲ್ಲಿ 70 ಕಡ್ಡಾಯ ಕರ್ಮಗಳನ್ನು ನಿರ್ವಹಿಸಿದವನಂತಾಗುವನು. ಅದು ಸಹನೆಯ ತಿಂಗಳಾಗಿದೆ. ಸಹನೆಯ ಪ್ರತಿಫಲ ಸ್ವರ್ಗವಾಗಿದೆ. ಸಮಾನತೆ ಮತ್ತು ಸಹಾನುಭೂತಿಯ ತಿಂಗಳಾಗಿದೆ. ವಿಶ್ವಾಸಿಯ ಸಮೃದ್ಧಿಯ ತಿಂಗಳಾಗಿದೆ. ಆ ತಿಂಗಳ ಆರಂಭವು ಅನುಗ್ರಹ, ಮಧ್ಯವು ಪಾಪ ವಿಮೋಚನೆ ಮತ್ತು ಅಂತ್ಯವು ನರಕ ಮುಕ್ತಿಯಾಗಿದೆ. ಆ ಅನುಗ್ರಹೀತ ತಿಂಗಳಲ್ಲಿ ಓರ್ವ ಉಪವಾಸಿಗನ ಪಾರಣೆ ಮಾಡಿಸಿದರೆ, ಅದು ಆತನ ಪಾಪಗಳಿಗೆ ಕ್ಷಮೆ ಮತ್ತು ನರಕದಿಂದ ಆತನಿಗೆ ವಿಮೋಚನೆಯಾಗುವುದು. ಅಂದು ಓರ್ವ ಉಪವಾಸಿಗನಿಗೆ ಕುಡಿಯಲು ಕೊಟ್ಟರೆ ಅಂತಿಮ ದಿನ ಅಲ್ಲಾಹನು ಆತನಿಗೆ ತನ್ನ ಚಿಲುಮೆಯಿಂದ ಕುಡಿಸುವನು. ತರುವಾಯ ಆತ ಸ್ವರ್ಗ ಪ್ರವೇಶ ಮಾಡುವ ತನಕ ಆತನಿಗೆ ಬಾಯಾರಿಕೆಯಾಗ ಲಾರದು. ಆ ತಿಂಗಳಲ್ಲಿ ತನ್ನ ಆಶ್ರಿತರೊಡನೆ ಸೌಮ್ಯವಾಗಿ ವರ್ತಿಸುವಾತನ ಪಾಪಗಳನ್ನು ಕ್ಷಮಿಸಿ ಆತನನ್ನು ನರಕಾಗ್ನಿ ಯಿಂದ ಮುಕ್ತಗೊಳಿಸಲಾಗುವುದು." (ಬೈಹಕಿ)

ಉಪವಾಸದಿಂದ ಆತ್ಮಶುದ್ಧಿಯಾದಂತೆ, ದೇಹಶುದ್ಧಿಯೂ ಆಗುತ್ತದೆ. ಪ್ರವಾದಿ ಮುಹಮ್ಮದ್(ಸ), "ನೀವು ಉಪವಾಸ ಆಚರಿಸಿರಿ. ಆ ಮೂಲಕ ನೀವು ಆರೋಗ್ಯವಂತ ರಾಗಬಹುದು" ಎಂದಿದ್ದಾರೆ. (ತಬ್ರಾನಿ, ಇಬ್ನು ಅದಿಮ್ಯ್)

ಇಮಾಮ್ ಗಝ್ಝಾಲಿಯವರ ದೃಷ್ಟಿಯಲ್ಲಿ, "ರಮಝಾನ್‌ನ ಉಪವಾಸ ವ್ರತವು ವಿಶ್ವಾಸದ ಕಾಲಂಶವಾಗಿದೆ. ಉಪವಾಸವು ಸಹನೆಯ ಅರ್ಧಾಂಶವಾಗಿದೆ. ಸಹನೆಯು ವಿಶ್ವಾಸದ ಅರ್ಧಾಂಶವಾಗಿದೆ" ಎಂದು ಪ್ರವಾದಿ ವಚನಗಳನ್ನು ಸಂಯೋಜಿಸಿ ಹೇಳಿದ್ದಾರೆ.

ಆತ್ಮ ನಿಯಂತ್ರಣ, ಆತ್ಮ ಸಂಸ್ಕರಣೆ, ಇಂದ್ರಿಯಗಳ ಮೇಲೆ ಹತೋಟಿ, ಭಾವ ವಿಕಾರಗಳಿಗೆ ತಡೆ, ಜೀವನಾವಶ್ಯಕತೆಗಳನ್ನು ವೈಭವದಿಂದ ಪೂರೈಸುವ ಅಥವಾ ಅವುಗಳೆಡೆಗೆ ವೈರಾಗ್ಯ ಬೆಳೆಸಿಕೊಳ್ಳುವುದೆರಡರ ನಡುವೆ ಸಂತುಲಿತ ರೂಪದಲ್ಲಿ ನ್ಯಾಯಮಾರ್ಗದಿಂದ ಅವುಗಳನ್ನು ಪೂರೈಸುವುದು ಉಪವಾಸದ ಶಿಕ್ಷಣ.

ತಕ್ವಾ(ದೇವಭಯ)

ಉಪವಾಸದ ಆಧ್ಯಾತ್ಮಿಕ ಗುರಿ ಇದುವೇ ಆಗಿದೆ. "ನಿಮ್ಮ ಪೈಕಿ ಅತ್ಯಧಿಕ ಧರ್ಮ ನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಅರ್ಹನು."

(ಪವಿತ್ರ ಕುರ್‌ಆನ್, 49:13)

ಪ್ರವಾದಿಯವರು(ಸ) ತಮ್ಮ ಹೃದಯದ ಮೇಲೆ ಕೈಯಿಡುತ್ತಾ 'ತಕ್ವಾ ಇಲ್ಲಿದೆ' ಎಂದು ಮೂರು ಬಾರಿ ಆವರ್ತಿಸಿ ಹೇಳಿರುವುದು ಗಮನಾರ್ಹ. 'ತಕ್ವಾ' ಏನೆಂದು ಒಬ್ಬ ಸಹಾಬಿಯು ಇನ್ನೊಬ್ಬರೊಡನೆ ಕೇಳಿದಾಗ, ಮುಳ್ಳುಕಂಟಿಗಳಿರುವ ಪೊದೆಗಳ ಮಧ್ಯೆಯಿರುವ ಕಾಲು ದಾರಿಯಲ್ಲಿ ನೀವೆಂದಾದರೂ ಹೋಗಿಲ್ಲವೇ? ಆಗ ನೀವು ಏನು ಮಾಡುತ್ತೀರಿ ಎಂದು ಪ್ರಶ್ನಿಸಿದರು. ಆಗ ಅವರು, ಎಲ್ಲಾದರೂ ನಮ್ಮ ಬಟ್ಟೆ ಮುಳ್ಳುಕಂಟಿಗೆ ಸಿಕ್ಕಿ ಹಾಕಿಕೊಳ್ಳಬಹುದೋ ಎಂಬ ಭಯದಿಂದ ನಾವು ಬಟ್ಟೆಯನ್ನು ಶರೀರಕ್ಕೆ ಅಂಟಿಸಿಕೊಂಡು ಜಾಗ್ರತೆಯಿಂದ ನಡೆಯುತ್ತೇವೆ ಎಂದರು. ಆಗ ಅವರು, "ಇದುವೇ ತಕ್ವಾ. ಇಸ್ಲಾಮಿನ ನೇರ ಮಾರ್ಗದಲ್ಲಿ ಕೆಡುಕಿನ ಕಡೆಗೆ ವಾಲದೆ ಸ್ವರ್ಗದತ್ತ ನಡೆಯಬೇಕು. ಜೀವನವು ಕುಫ್ರ್, ಶಿರ್ಕ್(ಸತ್ಯನಿಷೇಧ, ಬಹುದೇವತ್ವ) ಮತ್ತು ಫಿಸ್ಕ್(ಕರ್ಮಭ್ರಷ್ಟತೆ)ಗಳಲ್ಲಿ ಸಿಕ್ಕಿಹಾಕಿ ಕೊಳ್ಳದಂತೆ ಜಾಗ್ರತೆ ವಹಿಸಬೇಕು ಎಂದರು."

ದೇವಾದೇಶಗಳ ಪಾಲನೆ, ನಿಷಿದ್ಧ ವಸ್ತುಗಳಿಂದ ದೂರವಿರುವುದು ಮತ್ತು ನಾವು ಅಲ್ಲಾಹನ ದಾಸರೆಂಬ ಪ್ರಜ್ಞೆಯನ್ನು ಜೀವನದ ಸಕಲ ರಂಗಗಳಲ್ಲಿ ಬೆಳೆಸಿಕೊಳ್ಳುವುದನ್ನು 'ತಕ್ವಾ' ಎನ್ನಲಾಗಿದೆ.

ಉಪವಾಸದಿಂದ ಈ ಗುಣಗಳು ಬೆಳೆಯುತ್ತವೆ.

ಆದ್ದರಿಂದಲೇ 'ಅಲ್ಲಾಹನು ಅನುಮತಿಸಿದ ರಿಯಾಯಿತಿ ಅಥವಾ ರೋಗವಿಲ್ಲದೆ ಯಾವನಾದರೂ ವಿನಾಕಾರಣ ಉಪವಾಸ ತೊರೆದರೆ, ಆತ ಆಯುಷ್ಕಾಲ ಪರ್ಯಂತ ಉಪವಾಸ ಆಚರಿಸಿದರೂ ಅದರ ಪರಿಹಾರವಾಗಲಾರದು" ಎಂದು ಪ್ರವಾದಿ(ಸ) ಹೇಳಿರುವರು. (ಬುಖಾರಿ, ತಿರ್ಮಿದಿ, ಅಹ್ಮದ್, ಅಬೂದಾವೂದ್, ಇಬ್ನುಮಾಜಃ)

ಝಕಾತ್(ಕಡ್ಡಾಯ ದಾನ)

ಸಂಪತ್ತಿನ ಮೂಲಕ ಸಲ್ಲಿಸುವ ಆರಾಧನೆ, ಸಂಪತ್ತು ಗಳಿಕೆಯನ್ನೇ ಗುರಿಯಾಗಿಟ್ಟು ಕೊಂಡು ಜೀವನ ನಿರ್ವಹಿಸುವವರಿಗೆ ಸಂಪತ್ತಿನ ಮೋಹವನ್ನು ಕಳಚುವ ಆರಾಧನೆ ಯಾಗಿದೆ ಝಕಾತ್.

"ವಾಸ್ತವದಲ್ಲಿ ಈ ಸದಕಾತ್ (ಕಡ್ಡಾಯ ದಾನ) ಫಕೀರ(ಬಡವ)ರಿಗೆ, ಮಿಸ್ಕೀನ್(ದರಿದ್ರ)ರಿಗೆ, ಸದಕಾತ್ ಕಾರ್ಯಗಳಲ್ಲಿ ನೇಮಕಗೊಂಡವರಿಗೆ, ಮನವೊಲಿಸ ಬೇಕಾದ ಅಗತ್ಯವಿರುವವರಿಗೆ, ಕೊರಳು ಬಿಡಿಸುವುದಕ್ಕೆ, ಸಾಲಗಾರರಿಗೆ ನೆರವು ನೀಡಲಿಕ್ಕೆ, ಅಲ್ಲಾಹನ ಮಾರ್ಗದಲ್ಲಿ ಮತ್ತು ಪ್ರಯಾಣಿಕರ ಆದರಕ್ಕಾಗಿ ಖರ್ಚು ಮಾಡಲಿಕ್ಕಾಗಿ ರುತ್ತವೆ. ಅಲ್ಲಾಹನ ಕಡೆಯ ಒಂದು ಕಡ್ಡಾಯವಿದು. ಅಲ್ಲಾಹನು ಸರ್ವಜ್ಞನೂ, ಮಹಾಧೀಮಂತನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್, 9:60)

ಮುಸ್ಲಿಮರು (ಸತ್ಯವಿಶ್ವಾಸಿಗಳು) ತಮ್ಮ ಸಂಪತ್ತಿನ 2.5% ಭಾಗವನ್ನು, ಕೃಷಿ ಆದಾಯದ 10% ಭಾಗವನ್ನು ಕಡ್ಡಾಯವಾಗಿ ಸಂಬಂಧಿಕರಿಗೆ, ನೆರೆಹೊರೆಯವರಿಗೆ, ಇನ್ನುಳಿದವರಿಗೆ ಮೇಲಿನ ಕುರ್‌ಆನಿನ ಸೂಕ್ತದಲ್ಲಿ ವಿವರಿಸಿರುವ ಪ್ರಕಾರ ಹಂಚುತ್ತಾರೆ.

ಇದರಿಂದ ಆ ಸಂಪತ್ತಿನ ಸಂಸ್ಕರಣೆಯಾಗುವುದಲ್ಲದೇ ಮನಸ್ಸಿನಿಂದ ಧನದ ವ್ಯಾಮೋಹವು ಹೋಗಿ ಬಿಡುತ್ತದೆ. ಸಮಾಜದ ಎಲ್ಲ ವರ್ಗದ ಜನರು ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ನೀಡುತ್ತದೆ, ತನ್ಮೂಲಕ ಸಹೋದರತಾ ಭಾವನೆಯನ್ನು ಅವರಲ್ಲಿ ಬಿತ್ತುತ್ತದೆ.

ಆದರೆ ವೈಯುಕ್ತಿಕವಾಗಿ ಈ ಹಣ ವಿತರಿಸಿದರೆ ತುಂಬಾ ಅವಶ್ಯಕತೆಯುಳ್ಳ ಕೆಲವು ಜನರಿಗೆ ಅದು ಸಿಗದೆ ಹೋಗಬಹುದು. ಆದ್ದರಿಂದ ಪ್ರವಾದಿವರ್ಯರ(ಸ) ಮಾದರಿಯಲ್ಲಿ ಸಾಮೂಹಿಕ ವಿತರಣಾ ವ್ಯವಸ್ಥೆಯಿರಿಸಿಕೊಳ್ಳುವುದು ಉತ್ತಮ. ಇದೀಗ ಹಲವಾರು ಕಡೆ ಇಂತಹ ವ್ಯವಸ್ಥೆಗಳನ್ನು ಮಾಡಿ 'ಝಕಾತ್'ನ ಸಮರ್ಪಕ ವಿತರಣಾ ವ್ಯವಸ್ಥೆಗೆ ಏರ್ಪಾಡು ಮಾಡಲಾಗಿದೆ. ಪ್ರವಾದಿ(ಸ) ಹೇಳಿರುವರು, "ಝಕಾತ್‌ನ ಮೂಲಕ ನಿಮ್ಮ ಸಂಪತ್ತನ್ನು ಸುರಕ್ಷಿತಗೊಳಿಸಿರಿ, ದಾನದಿಂದ ನಿಮ್ಮ ರೋಗಗಳ ಚಿಕಿತ್ಸೆ ಮಾಡಿರಿ. ವಿನಯ ಮತ್ತು ಪ್ರಾರ್ಥನೆಯಿಂದ ಪರೀಕ್ಷೆಗಳನ್ನು ಎದುರಿಸಿರಿ."

ರಮಝಾನ್ ತಿಂಗಳಲ್ಲೇ 'ಝಕಾತ'ನ್ನು ಕೊಡಬೇಕೆಂದಿಲ್ಲ. ಸಂಪತ್ತಿಗೆ ಒಂದು ವರ್ಷ ಪೂರ್ತಿಯಾದಾಕ್ಷಣ ನೀಡಬೇಕು. ಆದರೂ ಈ ತಿಂಗಳಲ್ಲಿ ಕೊಡುವ ಸಾಮಾನ್ಯ ಪರಿಪಾಠವಿದೆ.

ಕುರ್‌ಆನ್ ಅವತೀರ್ಣ

"ರಮಝಾನ್ ಅಖಿಲ ಮಾನವಕುಲಕ್ಕೆ ಸನ್ಮಾರ್ಗದರ್ಶಕ, ಸತ್ಯಾಸತ್ಯ ವಿವೇಚಕ ಮತ್ತು ಸಾನ್ಮಾರ್ಗಿಕವಾದ ಸುಸ್ಪಷ್ಟ ಆದೇಶಗಳೊಂದಿಗೆ ಕುರ್‌ಆನ್ ಅವತೀರ್ಣಗೊಂಡ ತಿಂಗಳಾಗಿದೆ. ಆದ್ದರಿಂದ ಇನ್ನು ಮುಂದೆ ನಿಮ್ಮ ಪೈಕಿ ಯಾರು ಆ ತಿಂಗಳನ್ನು ಪಡೆಯುವರೋ ಅವರು ಆ ತಿಂಗಳಲ್ಲಿ ಸಂಪೂರ್ಣ ಉಪವಾಸ ಆಚರಿಸಲಿ."

(ಪವಿತ್ರ ಕುರ್‌ಆನ್, 2:185)

ಕುರ್‌ಆನ್ ಮಾನವನ ಮಾರ್ಗದರ್ಶನಕ್ಕಾಗಿ ಸೃಷ್ಟಿಕರ್ತನಿಂದ ಅವತೀರ್ಣಗೊಂಡ ಸಮಗ್ರ ಜೀವನ ಕೈಪಿಡಿ. ಹ.ಅಬೂ ಉಮಾಮಾ(ರ) ವರದಿ ಮಾಡಿರುವಂತೆ-ಪ್ರವಾದಿ(ಸ), "ನೀವು ಕುರ್‌ಆನ್ ಪಾರಾಯಣ ಮಾಡಿರಿ, ಏಕೆಂದರೆ ಅಂತಿಮ ದಿನ ಕುರ್‌ಆನ್ ಖಂಡಿತವಾಗಿಯೂ ನಿಮ್ಮ ಪರವಾಗಿ ಶಿಫಾರಸು ಮಾಡುವುದು" ಎಂದು ಹೇಳಿದ್ದಾರೆ. **(ಮುಸ್ಲಿಮ್).** ರಮಝಾನ್ ತಿಂಗಳಿಡೀ ಮುಸ್ಲಿಮರು ಅತ್ಯಂತ ಶ್ರದ್ಧೆಯಿಂದ ಕುರ್‌ಆನ್ ಪಾರಾಯಣ ಮಾಡುತ್ತಾರೆ. "ಕುರ್‌ಆನ್ ಕಲಿತು ಇತರರಿಗೆ ಕಲಿಸುವವರೇ ನಿಮ್ಮ ಪೈಕಿ ಅತ್ಯುತ್ತಮರು." (ಬುಖಾರಿ), ಇದೇ ತಿಂಗಳಲ್ಲಿ ಕುರ್‌ಆನಿನ ಅತ್ಯಧಿಕ ಪಾರಾಯಣವನ್ನು ಮಾಡಲಾಗುತ್ತದೆಯಷ್ಟೇ ಅಲ್ಲ, ಅದರ ಅಧ್ಯಯನವನ್ನೂ ಮಾಡಿ ಅನುಸರಣೆಯ ಪ್ರೇರಣೆಯನ್ನು ಪಡೆಯಲಾಗುತ್ತದೆ.

ಇಅ್‌ತಿಕಾಫ್(ತಪಶ್ಚರ್ಯೆ)

ಇಅ್‌ತಿಕಾಫ್ ಎಂದರೆ ವ್ಯಕ್ತಿಯು ಎಲ್ಲ ಕಡೆಗಳಿಂದ ತನ್ನ ಗಮನಗಳನ್ನು ಸರಿಸಿ ಸಂಪೂರ್ಣ ಏಕಾಗ್ರಚಿತ್ತದಿಂದ ಸೃಷ್ಟಿಕರ್ತನಾದ ಅಲ್ಲಾಹನ ಕಡೆಗೆ ಗಮನ ಹರಿಸುವುದು.

ಸದಾ ಅವನ ಸ್ಮರಣೆ ಮತ್ತು ಆರಾಧನೆಯನ್ನು ಮಾಡುತ್ತಲಿರುವುದು. ಈ ಉದ್ದೇಶಕ್ಕಾಗಿ ರಮಝಾನ್‌ನ ಕೊನೆಯ ಹತ್ತು ದಿನಗಳನ್ನು ಅರ್ಥಾತ್ ಈದ್‌ನ ಚಂದ್ರದರ್ಶನವಾಗುವ ವರೆಗಿನ ಅವಧಿಯನ್ನು ನಿಶ್ಚಯಿಸಲಾಗಿದೆ. ಹ. ಆಯಿಶಾ(ರ) ಈ ರೀತಿ ವರದಿ ಮಾಡಿರುವರು, "ಪ್ರವಾದಿವರ್ಯರು(ಸ) ರಮಝಾನಿನ ಕೊನೆಯ ಹತ್ತು ದಿನಗಳಲ್ಲಿ ಇಅ್‌ತಿಕಾಫ್ ಮಾಡುತ್ತಿದ್ದರು. ಅಲ್ಲಾಹನು ಅವರನ್ನು ಎತ್ತಿಕೊಳ್ಳುವ ತನಕ. ಅವರ ನಂತರ ಅವರ ಪತ್ನಿಯರು ಇಅ್‌ತಿಕಾಫ್ ಮಾಡುತ್ತಿದ್ದರು."

(ಬುಖಾರಿ ಮುಸ್ಲಿಮ್)

ಪ್ರವಾದಿ ಮುಹಮ್ಮದರು(ಸ) ತಮ್ಮ ಜೀವಿತಾವಧಿಯಲ್ಲಿ ಅತ್ಯಂತ ನಿಷ್ಠೆಯಿಂದ ಇಅ್‌ತಿಕಾಫ್ ಮಾಡಿದ ಕಾರಣ ಪ್ರತಿಯೊಂದು ಊರಿನಲ್ಲಿಯೂ ಪ್ರತಿ ಮಸೀದಿಯಲ್ಲೂ ಕನಿಷ್ಠ ಒಬ್ಬರಾದರೂ ಇಅ್‌ತಿಕಾಫ್ ಮಾಡುವ ಸಂಕಲ್ಪವನ್ನು ಕೈಗೊಂಡಿರುತ್ತಾರೆ. ಅತ್ಯಂತ ಅವಶ್ಯಕವಾದ ಸಂದರ್ಭಗಳನ್ನು ಹೊರತುಪಡಿಸಿ ಇಅ್‌ತಿಕಾಫ್‌ನ ಸಮಯದಲ್ಲಿ ಮಸೀದಿಯಿಂದ ಹೊರ ಹೋಗಲು ಅನುಮತಿಯಿಲ್ಲ.

ತರಾವೀಹ್

ತರಾವೀಹ್ ನಮಾಝ್ ರಮಝಾನ್ ತಿಂಗಳಲ್ಲಿ ಮಾಡುವ ವಿಶಿಷ್ಟ ಆರಾಧನೆ. ಇನ್ನಿತರ ಸಮಯಗಳಲ್ಲಿ ರಾತ್ರೆ ಮಲಗಿ ಎದ್ದು ನಮಾಝ್ ನಿರ್ವಹಿಸಿದರೆ ಈ ನಮಾಝನ್ನು 'ತಹಜ್ಜುದ್' ಎಂದು ಕರೆಯಲಾಗುತ್ತದೆ. ರಮಝಾನ್ ತಿಂಗಳಲ್ಲಿ ಈ ನಮಾಝನ್ನು 'ಇಶಾ' ನಮಾಝಿನೊಟ್ಟಿಗೆ ನಿರ್ವಹಿಸಲಾಗುತ್ತದೆ. ಪ್ರತಿ ನಾಲ್ಕು ರಕಅತ್ ನಮಾಝ್‌ನ ನಂತರ ಸ್ವಲ್ಪ ವಿಶ್ರಾಂತಿ ಪಡೆದು ನಿರ್ವಹಿಸುವ ಈ ನಮಾಝನ್ನು 'ತರಾವೀಹ್ ನಮಾಝ್' ಎಂದು ಕರೆಯುತ್ತಾರೆ.

ಪ್ರತಿ ಮಸೀದಿಯಲ್ಲೂ ಈ ನಮಾಝನ್ನು ನಿರ್ವಹಿಸಲು ಹಾಫಿಝ್‌ರನ್ನು (ಕುರ್‌ಆನನ್ನು ಪೂರ್ಣ ಕಂಠಪಾಠ ಮಾಡಿದ ವ್ಯಕ್ತಿ) ನೇಮಿಸಲಾಗುತ್ತದೆ. ಈ ಮೂಲಕ ತರಾವೀಹ್ ನಮಾಝ್ ನಿರ್ವಹಿಸುವವರಿಗೆ ಸಂಪೂರ್ಣ ಕುರ್‌ಆನ್ ಪಾರಾಯಣದ ಪುಣ್ಯವೂ ಲಭಿಸುತ್ತದೆ. ಜಾಗರಣೆಯ ರಾತ್ರಿಗಳಲ್ಲಿ ಸಾಮಾನ್ಯವಾಗಿ 'ತರಾವೀಹ್' ನಮಾಝನ್ನು ಸ್ವಲ್ಪ ತಡವಾಗಿ ನಿರ್ವಹಿಸಲಾಗುತ್ತದೆ.

ಲೈಲತುಲ್ ಕದ್ರ್

ಇದರ ಕುರಿತು ಪ್ರತ್ಯೇಕ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಸತ್ಕರ್ಮಗಳಿಗೆ ಅಗಣಿತ ಪ್ರತಿಫಲ

ರಮಝಾನ್ ತಿಂಗಳಲ್ಲಿ ನಿರ್ವಹಿಸುವ ಒಂದು ಕಡ್ಡಾಯ ಕರ್ಮಕ್ಕೆ ಎಪ್ಪತ್ತು ಕಡ್ಡಾಯ ಕರ್ಮಗಳನ್ನು ನಿರ್ವಹಿಸಿದ ಪುಣ್ಯದ ವಾಗ್ದಾನ ಮಾಡಲಾಗಿದೆ. ಆದ್ದರಿಂದಲೇ ಇದನ್ನು "ಸತ್ಕರ್ಮಗಳ ಮಹೋತ್ಸವ" ಹಾಗೂ "ಪುಣ್ಯಗಳ ವಸಂತ" ಎಂದು

ಬಣ್ಣಿಸಲಾಗಿದೆ. ಕೆಡುಕಿನ ದ್ವಾರವನ್ನು ಮುಚ್ಚುವ ಹಾಗೂ ಒಳಿತನ್ನು ತುಂಬು ಹೃದಯದಿಂದ ಸ್ವಾಗತಿಸುವ ತಿಂಗಳು ಇದಾಗಿದೆ.

ಈ ರೀತಿಯಾಗಿ ತಿಂಗಳಿಡೀ ಸತ್ಕರ್ಮಗಳನ್ನೆಸಗಿ ಅವುಗಳ ಪ್ರತಿಫಲದ ನಿರೀಕ್ಷೆಯಲ್ಲಿರುವವರಿಗೆ ಹಬ್ಬದ ಚಂದ್ರನನ್ನು ಕಂಡಾಕ್ಷಣ ಆಗುವ ಆನಂದವು ಅವರ್ಣನೀಯವಾಗಿದೆ. ಮಸೀದಿಯ ಧ್ವನಿವರ್ಧಕಗಳಲ್ಲಿ 'ತಕ್ಬೀರ್' ಮೊಳಗಿಸುವ ಮೂಲಕ 'ಈದ್‌ನ ಚಂದ್ರದರ್ಶನವಾಯಿತು, ನಾಳೆ ಹಬ್ಬ ಆಚರಿಸಲಾಗುವುದು' ಎಂದು ಘೋಷಿಸಲಾಗುತ್ತದೆ. ಪೇಟೆಯಲ್ಲಿ ಅಂಗಡಿಗಳೆಲ್ಲ ಮುಂಜಾವಿನವರೆಗೆ ಅಥವಾ ಕನಿಷ್ಠ ಮಧ್ಯರಾತ್ರಿಯ ವರೆಗಾದರೂ ತೆರೆದಿರುತ್ತವೆ.

ಮುಂಜಾನೆ ಎದ್ದು ಬೇಗನೆ ಸ್ನಾನ ಮಾಡಿ ತಮ್ಮ ಶಕ್ತ್ಯಾನುಸಾರ ಉತ್ತಮ ಹೊಸ ಉಡುಪುಗಳನ್ನು ಧರಿಸುತ್ತಾರೆ. ಬೆಳಗ್ಗಿನ ಉಪಹಾರದೊಂದಿಗೆ ಸಿಹಿಯನ್ನು ಸೇವಿಸಿ ಪರಿಮಳ ದ್ರವ್ಯಗಳನ್ನು ಪೂಸಿಕೊಂಡು 'ತಕ್ಬೀರ್'ಗಳನ್ನು ಹೇಳುತ್ತ 'ಈದ್‌ಗಾ' ಮೈದಾನ ದೆಡೆಗೆ ಹೊರಡುತ್ತಾರೆ. ಹ. ಅಬೂ ಸಈದ್ ಖುದ್ರಿ(ರ) ವರದಿ ಮಾಡಿರುವರು, "ಪ್ರವಾದಿ(ಸ) 'ಈದುಲ್ ಫಿತ್ರ್' ಮತ್ತು 'ಈದುಲ್ ಅಝ್‌ಹಾ'ದ ದಿವಸ ಈದ್ಗಾದ ಕಡೆಗೆ ಹೊರಡುತ್ತಿದ್ದರು. ಮೊದಲು ನಮಾಝ್ ಆರಂಭಿಸುತ್ತಿದ್ದರು. ನಮಾಝ್ ಮುಗಿದ ಬಳಿಕ ಜನರ ಕಡೆಗೆ ಮುಖ ಮಾಡಿ ನಿಲ್ಲುತ್ತಿದ್ದರು. ಜನರು ತಮ್ಮ ಪಂಕ್ತಿಗಳಲ್ಲೇ ಕುಳಿತಿರುತ್ತಿದ್ದರು. ಆ ಮೇಲೆ ಅವರು ಜನರಿಗೆ ಪ್ರವಚನ ನೀಡುತ್ತಿದ್ದರು, ತಾಕೀತು ಮತ್ತು ಆದೇಶ ನೀಡುತ್ತಿದ್ದರು."

(ಬುಖಾರಿ, ಮುಸ್ಲಿಮ್)

ಈ ಮಾದರಿಯಲ್ಲಿ ಇಂದು ಖತೀಬರು ವರ್ತಮಾನದ ಸಾಮಾಜಿಕ ಪರಿಸ್ಥಿತಿ ಇತ್ಯಾದಿಗಳ ಕುರಿತು ಸಂಕ್ಷಿಪ್ತವಾದ ಉಪನ್ಯಾಸವನ್ನು ನೀಡಿ ಸಾಮೂಹಿಕ ನಮಾಝನ್ನು ನೆರವೇರಿಸುತ್ತಾರೆ. ಪ್ರಾರ್ಥನೆಯಾದೊಡನೆ ಪ್ರತಿಯೊಬ್ಬರೂ ಒಬ್ಬರನ್ನೊಬ್ಬರು ಆಲಂಗಿಸುತ್ತಾ ಶುಭಾಶಯಗಳನ್ನು ಹೇಳುತ್ತಾರೆ. ಈದ್‌ಗಾ ಮೈದಾನಕ್ಕೆ ಹೋಗಲು ಬಳಸಿದ ಹಾದಿ ಬಿಟ್ಟು ಜನರು ಇನ್ನೊಂದು ಹಾದಿಯ ಮೂಲಕ ತಮ್ಮ ತಮ್ಮ ಮನೆಗೆ ಮರಳುತ್ತಾರೆ. ಭಕ್ಷ್ಯ ಭೋಜನಗಳನ್ನು ಸೇವಿಸಿದ ನಂತರ ಬಂಧು ಮಿತ್ರರ ಮನೆಗೆ ತೆರಳಿ ಶುಭಾಶಯಗಳನ್ನು ಕೋರುತ್ತಾರೆ.

ಈದ್‌ನ ದಿನ ಅಲ್ಲಾಹನು ತನ್ನ ದೇವಚರರೊಡನೆ ಕೇಳುತ್ತಾನೆ, "ದಾಸನೋರ್ವ ತನ್ನ ಕೆಲಸ ಪೂರ್ತಿಗೊಳಿಸಿದ ಬಳಿಕ ಅವನಿಗೆ ಏನನ್ನು ನೀಡಬೇಕು?" ದೇವಚರರು ಹೇಳುತ್ತಾರೆ, "ಓ ನಮ್ಮ ಪ್ರಭೂ! ಆತನಿಗೆ ಆತನ ಕಾರ್ಯಕ್ಕೆ ಸಂಪೂರ್ಣ ಪ್ರತಿಫಲ ನೀಡಬೇಕು." ಆಗ ಅಲ್ಲಾಹನು ಹೀಗೆನ್ನುತ್ತಾನೆ, "ನನ್ನ ದಾಸರೇ, ನೀವು ಸಾಕ್ಷಿಗಳಾಗಿರಿ, ನನ್ನ ದಾಸ ನನಗಾಗಿ ದಿನದಲ್ಲಿ ಉಪವಾಸ ವ್ರತವನ್ನಾಚರಿಸಿದ ಮತ್ತು ರಾತ್ರಿಗಳಲ್ಲಿ ನಮಾಝ್‌ಗಳನ್ನು ನಿರ್ವಹಿಸಿದ. ಅದಕ್ಕೆ ಪ್ರತಿಫಲವಾಗಿ ನಾನು ಅವನಿಗಾಗಿ ಕ್ಷಮೆ ಮತ್ತು ಒಲುಮೆಯ ಅಮೃತವನ್ನು ವರ್ಷಿಸುತ್ತೇನೆ." ಹೀಗೆ ಅಲ್ಲಾಹನ ದಾಸರು

ಈದ್ಗಾಹ್‌ಗೆ ತೆರಳುವಾಗ ದೇವಚರರು ದಾರಿಯ ಇಕ್ಕೆಲಗಳಲ್ಲಿಯೂ ನಿಂತು ಅವರನ್ನು ಸ್ವಾಗತಿಸುತ್ತಾರೆ. "ಅಲ್ಲಾಹನ ಕೃಪೆ ನಿಮ್ಮ ಮೇಲಿರಲಿ, ನೀವು ಅನುಷ್ಠಾನಿಸಿದ ಉಪವಾಸ ಮತ್ತು ರಾತ್ರಿ ನಮಾಝ್‌ಗಳಿಗಾಗಿ ಇದೋ ಅಲ್ಲಾಹನು ಪ್ರತಿಫಲ ನೀಡುತ್ತಿದ್ದಾನೆ. ನಿಮ್ಮ ಕರ್ಮಗಳಿಗೆ ಬಹುಮಾನವಿದು, ಪಡೆದು ಕೊಳ್ಳಿರಿ" ಎಂದು ಶುಭ ಕೋರುತ್ತಾರೆ.

ಒಂದು ತಿಂಗಳ ಸತ್ಕರ್ಮಗಳ ತರಬೇತಿಯ ನಂತರ ಪ್ರತಿಫಲ ಪಡೆಯುವ ಸಂಭ್ರಮ ಹಾಗೂ ಈ ತರಬೇತಿಯ ವ್ಯಾವಹಾರಿಕ ಅನುಷ್ಠಾನದ ಪ್ರೇರಣೆಯನ್ನು 'ಈದುಲ್ ಪಿತ್ರ್' ನೀಡುತ್ತದೆ.

ಸದಕತುಲ್ ಫಿತ್ರ್

ರಮಝಾನ್ ತಿಂಗಳ ಉಪವಾಸ ಆಚರಿಸಿ, ಈದುಲ್ ಫಿತ್ರ್ ಹಬ್ಬದ ದಿನ ಈದ್‌ನ ನಮಾಝ್‌ಗಿಂತಲೂ ಮುಂಚೆ ತಲಾ 21/2 ಕೆ.ಜಿ. ಅಕ್ಕಿ, ಗೋಧಿಯಂತಹ ಧಾನ್ಯವನ್ನು ಅಥವಾ ಅದರ ಬೆಲೆಯನ್ನು ಬಡಬಗ್ಗರಿಗೆ ಹಂಚಲಾಗುವುದು. ಅಂದಿನ ಅನ್ನಾಹಾರಕ್ಕೂ ಮಿಕ್ಕಿದ್ದು ಉಳ್ಳವರಿಗೆ 'ಪಿತ್ರ್' ಕಡ್ಡಾಯವಾಗಿದೆ. ಇದು ಉಪವಾಸದ ಸಮಯದಲ್ಲಿ ಸಂಭವಿಸಿದ ಸಣ್ಣ ಪುಟ್ಟ ತಪ್ಪುಗಳಿಗೆ ಪ್ರಾಯಶ್ಚಿತ್ತವಾಗಿರುತ್ತದೆ, ಇದಲ್ಲದೇ ಇದರ ಮೂಲ ಉದ್ದೇಶವು ಬಡಬಗ್ಗರೂ ಹಬ್ಬದ ಸಂಭ್ರಮ ಸಡಗರದಲ್ಲಿ ಸಮಾನವಾಗಿ ಪಾಲ್ಗೊಳ್ಳುವಂತೆ ಅವಕಾಶ ಕಲ್ಪಿಸುವುದಾಗಿದೆ.

□ □ □

ಈದುಲ್ ಅಝ್‌ಹಾ

ದುಲ್‌ಹಜ್ಜ್ ತಿಂಗಳ 10ನೆಯ ತಾರೀಕಿನಂದು ಆಚರಿಸಲ್ಪಡುವ ಈ ಹಬ್ಬಕ್ಕೆ ಸಾಮಾನ್ಯವಾಗಿ 'ಈದ್ ಎ ಕುರ್ಬಾನ್' ಎಂತಲೇ ಕರೆಯಲಾಗುತ್ತದೆ. ಈ ದಿನವನ್ನು 'ಯೌಮುನ್ನಹರ್' ಎಂದೂ ಕರೆಯುವುದುಂಟು. 'ನಹರ್' ಎಂದರೆ 'ದಿಬಹ್' ಮಾಡುವುದು. ಅಂದು ಸ್ಥಿತಿವಂತ ಮುಸ್ಲಿಮರು 'ಕುರ್ಬಾನಿ' ಮಾಡುತ್ತಾರೆ. ಆದ್ದರಿಂದ ಇದನ್ನು 'ಯೌಮುನ್ನಹರ್' ಎಂದು ಕರೆಯಲಾಗಿದೆ.

ಈ ಹಬ್ಬದಂದು ನೀಡಲಾಗುವ ಬಲಿದಾನವು ಇಸ್ಲಾಮಿ ಇತಿಹಾಸದಲ್ಲಿ ಘಟಿಸಿದ ಅಪೂರ್ವ ಘಟನೆಯ ಸ್ಮರಣೆಯಾಗಿದ್ದು, ಆ ಕಾರಣದಿಂದಲೇ ಇದನ್ನು ತ್ಯಾಗಸ್ಮರಣೆಯ 'ಅಪೂರ್ವ ಹಬ್ಬ' ಎಂದು ಬಣ್ಣಿಸಲಾಗಿದೆ.

ಪ್ರವಾದಿ ಇಬ್ರಾಹೀಮರು(ಅ) ವಿಗ್ರಹಾರಾಧನೆಯ ವಿರುದ್ಧ ನಡೆಸಿದ ಹೋರಾಟ, ತಮ್ಮ ಜನಾಂಗದವರೊಡನೆ ನಡೆಸಿದ ಸೆಣಸಾಟ, ಅಗ್ನಿಗೆ ಎಸೆಯಲ್ಪಟ್ಟ ವೃತ್ತಾಂತ, ಕೊನೆಗೆ ದೇಶವನ್ನೇ ತೊರೆಯಬೇಕಾದ ಸಂದರ್ಭಗಳು, ಸತ್ಯವಿಶ್ವಾಸದ ಹಾದಿಯಲ್ಲಿ ಅವರ ದೃಢಚಿತ್ತತೆಯನ್ನು ಸಾರುತ್ತವೆ. ಇಂತಹ ಎಲ್ಲ ಕಠಿಣ ಪರೀಕ್ಷೆಗಳಲ್ಲಿ ಅವರು

ಉತ್ತೀರ್ಣ ರಾದರು. ಪುತ್ರ ಇಸ್ಮಾಈಲ್‌ರೊಡನೆ ಪ್ರವಾದಿ ಇಬ್ರಾಹೀಮರು(ಅ), "ಮಗನೇ ನಿನ್ನನ್ನು ನಾನು (ದೇವ ಮಾರ್ಗದಲ್ಲಿ) ಬಲಿ ನೀಡುವ ಕನಸು ಕಂಡೆ. ನಿನ್ನ ಅಭಿಪ್ರಾಯವೇನು?" ಎಂದು ಪ್ರಶ್ನಿಸಿದಾಗ, "ಅಪ್ಪಾ, ಆಜ್ಞೆಯನ್ನು ಪಾಲಿಸಿರಿ, ಅಲ್ಲಾಹನ ಕೃಪೆಯಿದ್ದರೆ ನೀವು ನನ್ನನ್ನು ಸಹನಶೀಲರಲ್ಲಿ ಕಾಣುವಿರಿ" ಎಂದು ಉತ್ತರಿಸಿದರು (ಪವಿತ್ರ ಕುರ್‌ಆನ್: ಅಸ್ಸಾಫ್ಫಾತ್:102) ಹೀಗೆ ಅವರು ತಮ್ಮ ಮಗನನ್ನು ಬಲಿ ಕೊಡಲು ಸಿದ್ಧರಾದಾಗ, ಒಂದು ಆಡಿನ ದಂಡತೆತ್ತು ಅಲ್ಲಾಹನು ಇಸ್ಮಾಈಲ್‌ರನ್ನು ವಿಮೋಚನೆಗೊಳಿಸಿದನಲ್ಲದೇ ಅವರನ್ನು ಅಭಿನಂದಿಸಿದನು. "ಇಬ್ರಾಹೀಮರಿಗೆ ಸಲಾಮ್, ಹೀಗೆಯೇ ನಾವು ಸಜ್ಜನರಿಗೆ ಪ್ರತಿಫಲ ನೀಡುತ್ತೇವೆ. ಅವರು ನಿಶ್ಚಯವಾಗಿಯೂ ನಮ್ಮ ಸತ್ಯವಿಶ್ವಾಸಿಗಳಾದ ದಾಸರಲ್ಲಿ ಸೇರಿದವರಾಗಿದ್ದಾರೆ." (ಪವಿತ್ರ ಕುರ್‌ಆನ್ 37:109-111) ಈ ಘಟನೆಯು ಪ್ರವಾದಿ ಇಬ್ರಾಹೀಮರ(ಅ) ತ್ಯಾಗಮಯ ಜೀವನದ ಉತ್ತುಂಗವಾಗಿತ್ತು. ಈ ಘಟನೆಯ ಸ್ಮರಣೆಗಾಗಿ ಸತ್ಯವಿಶ್ವಾಸಿಗಳಲ್ಲಿ ಶಕ್ತರಾದವರ ಮೇಲೆ ಬಲಿದಾನವು ಪ್ರಬಲ ಸುನ್ನತ್ ಆಗಿದೆ.

"'ಕುರ್ಬಾನಿ' ನೀಡುವ ಸಾಮರ್ಥ್ಯದ ಹೊರತಾಗಿಯೂ ಯಾರಾದರೂ ಕುರ್ಬಾನಿ ಮಾಡದಿದ್ದರೆ ಅಂತಹವರು ನಮ್ಮ ಈದ್ಗಾಹ್‌ಗೆ ಬರಬಾರದು" ಎಂಬ ಪ್ರವಾದಿ ವರ್ಯರ(ಸ) ಎಚ್ಚರಿಕೆಯನ್ನು ನೆನಪಿಸಿ ಸಾಮರ್ಥ್ಯವುಳ್ಳ ಮುಸ್ಲಿಮರು ಅಂದು ಕುರ್ಬಾನಿಯನ್ನು ನೀಡುತ್ತಾರೆ. ಬಲಿದಾನಕ್ಕಾಗಿ ಯಾವುದೇ ಅಂಗವೈಕಲ್ಯವಿಲ್ಲದ ಉತ್ತಮ ಪ್ರಾಣಿಯನ್ನು ಆಯ್ಕೆ ಮಾಡಲಾಗುತ್ತದೆ. ಒಬ್ಬರಿಗೆ ಒಂದು ಆಡು, ಕುರಿ ಹಾಗೂ ಟಗರು ಸಾಕು. ಆದರೆ ಆಕಳು ಅಥವಾ ಒಂಟೆಯಾದಲ್ಲಿ ಅದರಲ್ಲಿ ಗರಿಷ್ಠ ಏಳುಜನ ಪಾಲುದಾರರಾಗಬಹುದು. ಬಲಿ ಪ್ರಾಣಿಯನ್ನು ಕಿಬ್ಲಾಭಿಮುಖವಾಗಿ ಮಲಗಿಸಿ 'ದಿಬಹ್' ಮಾಡಲಾಗುತ್ತದೆ. 'ದಿಬಹ್' ಮಾಡುವಾಗಿನ ಪ್ರಾರ್ಥನೆಯು ಕುರ್ಬಾನಿಯ ಮರ್ಮವನ್ನು ನಮ್ಮೆದುರು ಬಿಚ್ಚಿಡುತ್ತದೆ:

"ನಾನು ಪೂರ್ಣ ಏಕಾಗ್ರತೆಯೊಂದಿಗೆ ನನ್ನ ಮುಖವನ್ನು ಆಕಾಶ ಮತ್ತು ಭೂಮಿಯ ಸೃಷ್ಟಿಕರ್ತನಾದ ಅಲ್ಲಾಹನ ಕಡೆಗೆ ಮಾಡಿದೆ. ನಾನು ಆತನೊಂದಿಗೆ ಇತರರನ್ನು ಭಾಗೀದಾರರಾಗಿಸುವವನಲ್ಲ. ಖಂಡಿತವಾಗಿಯೂ ನನ್ನ ನಮಾಝ್, ನನ್ನ ಬಲಿದಾನ, ನನ್ನ ಜೀವನ, ನನ್ನ ಮರಣ ಎಲ್ಲವೂ ಸರ್ವಲೋಕ ಪರಿಪಾಲಕನಾದ ಅಲ್ಲಾಹನಿಗೇ ಮೀಸಲು. ಅವನಿಗಾರೂ ಜೊತೆಗಾರರಿಲ್ಲ. ಇದನ್ನೇ ನನಗೆ ಆಜ್ಞಾಪಿಸಲಾಗಿದೆ. ನಾನು ಮುಸ್ಲಿಮ್ (ವಿಧೇಯ)ಆಗಿರುವೆನು. ಓ ಅಲ್ಲಾಹ್! ನಿನಗೆ ಅರ್ಪಿಸುತ್ತಿದ್ದೇನೆ ಮತ್ತು ಇದು ನಿನ್ನ ಕೊಡುಗೆಯೇ ಆಗಿದೆ."

ಬಲಿಪ್ರಾಣಿಯ ಮಾಂಸದ 1/3 ಭಾಗವನ್ನು ಬಲಿ ನೀಡಿದವನು ತಾನೇ ಇಟ್ಟುಕೊಳ್ಳಲಿಕ್ಕೆ ಅನುಮತಿ ಇದೆ. ಕೆಲವರು ಇದರಲ್ಲೂ ಹೆಚ್ಚಿನ ಭಾಗವನ್ನು ಪುಣ್ಯ ಪ್ರತಿಫಲಾಕಾಂಕ್ಷೆಯಿಂದ ದಾನ ಮಾಡಿ ಬಿಡುತ್ತಾರೆ. ಉಳಿದ ಎರಡು ಭಾಗಗಳಲ್ಲಿ ಒಂದು ಭಾಗವನ್ನು ಬಡವರಿಗೂ, ಇನ್ನೊಂದು ಭಾಗವನ್ನು ಬಂಧು-ಬಳಗ,

ಆಪ್ತೇಷ್ಟರಿಗೂ ಹಂಚುತ್ತಾರೆ. ಪ್ರಾಣಿ ಬಲಿಯನ್ನು ಹಬ್ಬದ ದಿನ, ನಂತರದ ಎರಡು ಅಥವಾ ಮೂರು ದಿನಗಳಲ್ಲೂ ನೀಡಬಹುದು (ಅಯ್ಯಾಮುತ್ತಶ್ರೀಕ್). ಈ ನಾಲ್ಕು ದಿನಗಳಲ್ಲಿ ಉಪವಾಸ ವಿರುವುದನ್ನು ನಿಷಿದ್ಧಗೊಳಿಸಲಾಗಿದೆ. ಹೀಗೆ ಬಲಿ ನೀಡಲಾದ ಪ್ರಾಣಿಯ ಚರ್ಮಗಳನ್ನು ವಿಭಿನ್ನ ಸತ್ಕಾರ್ಯಗಳಿಗೆ ಸಹಾಯಧನವನ್ನಾಗಿ ನೀಡಲಾಗುತ್ತದೆ.

ಈ ಪ್ರಾಣಿ ಬಲಿದಾನವು ಮುನಿದ ದೇವತೆಗಳನ್ನು ಒಲಿಸಲಿಕ್ಕಾಗಲೀ ಅಥವಾ ಪಾಪಗಳ ಪರಿಹಾರ ರೂಪದಲ್ಲಿ ಒಪ್ಪಿಸಿ ಅಭಯವನ್ನು ಪಡೆಯಲಿಕ್ಕಾಗಲೀ ನೀಡುವುದು ಇಸ್ಲಾಮಿನ ತತ್ವವಲ್ಲ. **"ಅವುಗಳ ಮಾಂಸವಾಗಲೀ, ರಕ್ತವಾಗಲೀ ಅಲ್ಲಾಹನಿಗೆ ತಲುಪುವುದಿಲ್ಲ. ಆದರೆ ಅವನಿಗೆ ನಿಮ್ಮ ತಕ್ವಾ (ಧರ್ಮನಿಷ್ಠೆ) ತಲುಪುತ್ತದೆ."**

(ಪವಿತ್ರ ಕುರ್‌ಆನ್, 22:37)

ಪ್ರಾಣಿ ಬಲಿ ನೀಡಿ, ಸತ್ಯವಿಶ್ವಾಸಿಯು ಅಲ್ಲಾಹನ ಸಂಪ್ರೀತಿಗಾಗಿ ತನ್ನದೆಲ್ಲವನ್ನೂ ಹಾಗೂ ತನ್ನನ್ನೇ ಅಲ್ಲಾಹನ ಮಾರ್ಗದಲ್ಲಿ ಸಮರ್ಪಿಸಲು ಸಿದ್ಧನಿದ್ದೇನೆ ಎಂಬುದಾಗಿ ಸಂಕೇತಿಸುತ್ತಾನೆ.

ಹಬ್ಬದ ದಿನದಂದು 'ಈದುಲ್ ಫಿತ್ರ್'ನ ಹಾಗೆಯೇ ಪೂರ್ವ ಸಿದ್ಧತೆಗಳನ್ನು ನಡೆಸಲಾಗುತ್ತದೆ. ಸ್ನಾನ ಇತ್ಯಾದಿಗಳನ್ನು ಮುಗಿಸಿ ಹೊಸ ಬಟ್ಟೆಗಳನ್ನು ಧರಿಸಿ ಪರಿಮಳ ದ್ರವ್ಯವನ್ನು ಪೂಸಿಕೊಂಡು 'ತಕ್ಬೀರ್'ಗಳನ್ನು ಹೇಳುತ್ತಾ ಈದ್‌ಗಾ ಮೈದಾನದೆಡೆಗೆ ಹೊರಡುತ್ತಾರೆ. ಸಾಮಾನ್ಯವಾಗಿ ಈ ಹಬ್ಬದಲ್ಲಿ ಬೆಳಗ್ಗಿನ ಉಪಹಾರವನ್ನು ಸೇವಿಸುವುದಿಲ್ಲ. ಆದರೆ ಬಲಿ ನೀಡುವವರು 'ಬಲಿ ಕರ್ಮ' ಮುಗಿದ ನಂತರವೇ ಆಹಾರವನ್ನು ಸೇವಿಸುತ್ತಾರೆ. ಇದಕ್ಕೆ ಪ್ರವಾದಿಚರ್ಯೆಯು ಆಧಾರವಾಗಿದೆ. 'ಈದುಲ್ ಫಿತ್ರ್'ನಂತೆಯೇ 2 ರಕಅತ್ ನಮಾಝನ್ನು ನಿರ್ವಹಿಸಿದ ನಂತರ ಇಮಾಮರು ಹಬ್ಬದ ಮಹತ್ವದ ಕುರಿತು, ಹ. ಇಬ್ರಾಹೀಮರ(ಅ) ಪತ್ನಿ ಹಾಜಿರಾ ಹಾಗೂ ಅವರ ಮಗ ಇಸ್ಮಾಈಲರ(ಅ) ತ್ಯಾಗಮಯ ಜೀವನ ಹಾಗೂ ಸಂದೇಶಗಳ ಕುರಿತು ಉಪನ್ಯಾಸ ನೀಡುತ್ತಾರೆ. ಎಲ್ಲರೂ ಪರಸ್ಪರ ಶುಭಾಶಯಗಳನ್ನು ಕೋರುತ್ತ 'ಈದ್ಗಾಹ್'ಗೆ ಹೋಗಲು ಬಳಸಿದ ದಾರಿಯನ್ನು ಬಿಟ್ಟು ಇನ್ನೊಂದು ಹಾದಿಯನ್ನು ಬಳಸಿ ತಂತಮ್ಮ ಮನೆಗಳಿಗೆ ಹಿಂತಿರುಗುತ್ತಾರೆ. ನಂತರ ಪ್ರಾಣಿ ಬಲಿ ಮಾಡಲಾಗುತ್ತದೆ.

ಪ್ರಾಣಿಬಲಿಯನ್ನು ಈದ್‌ನ ನಮಾಝ್ ನಿರ್ವಹಿಸಿದ ನಂತರವೇ ಮಾಡಬೇಕು. ಏಕೆಂದರೆ ಬಲಿಕರ್ಮವು ಒಂದು ಆರಾಧನೆಯಾಗಿದ್ದು, ಪ್ರತಿಯೊಂದು ಆರಾಧನೆಯನ್ನು ಅಲ್ಲಾಹನು ನಿಶ್ಚಯಿಸಿದ ವಿಧಾನ ಹಾಗೂ ಸಮಯದ ಮಿತಿಯೊಂದಿಗೆ ನಿರ್ವಹಿಸುವುದು ಕಡ್ಡಾಯವಾಗಿದೆ.

'ಈದುಲ್ ಅಝ್‌ಹಾ'ದ ಇನ್ನೊಂದು ವಿಶೇಷತೆ ಏನೆಂದರೆ ಇದು ಮುಸ್ಲಿಮರ ಕಡ್ಡಾಯ ಆರಾಧನಾ ಕರ್ಮಗಳಲ್ಲೊಂದಾದ 'ಹಜ್ಜ್'ನ ಮುಕ್ತಾಯವನ್ನು ಸಾರುತ್ತದೆ.

"ಈ ಭವನದ ವರೆಗೆ ತಲುಪ[illegible] ಸಾಧನಾನುಕೂಲತೆಗಳಿರುವವನು ಅದರ ಹಜ್ಜ್ ಯಾತ್ರೆ ಕೈಗೊಳ್ಳಬೇಕೆಂಬುದು ಜನ[illegible] ಮೇಲೆ ಅಲ್ಲಾಹನ ಹಕ್ಕಾಗಿರುತ್ತದೆ. ಈ ಆಜ್ಞೆಯ

ಅನುಸರಣೆಯನ್ನು ಯಾರಾದರೂ ನಿರಾಕರಿಸಿದರೆ ಅಲ್ಲಾಹನು ಸಕಲ ಜಗತ್ತಿನವರಿಂದ ನಿರಪೇಕ್ಷನಾಗಿರುತ್ತಾನೆಂಬುದನ್ನು ಅವರು ಅರಿತಿರಬೇಕು.''

(ಪವಿತ್ರ ಕುರ್‌ಆನ್, 3:97)

ಕಅಬಾ ಭವನವು ಈ ಜಗತ್ತಿನ ಪ್ರಪ್ರಥಮ ಆರಾಧನಾಲಯವಾಗಿದ್ದು ಪ್ರವಾದಿ ಇಬ್ರಾಹೀಮರು(ಅ) ತಮ್ಮ ಮಗ ಹ. ಇಸ್ಮಾಈಲ್‌ರೊಡನೆ(ಅ) ಸೇರಿ ಅದನ್ನು ಪುನರ್ ನಿರ್ಮಿಸಿದ್ದರು. ಈ ಯಾತ್ರೆಯನ್ನು ಆರ್ಥಿಕ ಸಾಮರ್ಥ್ಯವುಳ್ಳ ಮುಸ್ಲಿಮರ ಮೇಲೆ ಕಡ್ಡಾಯಗೊಳಿಸಲಾಗಿದೆ. 'ಹಜ್ಜ್' ಯಾತ್ರೆಯ ಉದ್ದೇಶದ ಕುರಿತು, ''ಅವರು ಇಲ್ಲಿ ಅವರಿಗಾಗಿ ಇರಿಸಲಾಗಿರುವ ಪ್ರಯೋಜನಗಳನ್ನು ಪ್ರತ್ಯಕ್ಷವಾಗಿ ನೋಡು ವಂತಾಗಲು'' (ಪವಿತ್ರ ಕುರ್‌ಆನ್, 44:28) ಹಾಗೂ ''ಅದರಲ್ಲಿ ಸುವ್ಯಕ್ತ ಕುರುಹುಗಳಿವೆ'' (ಪವಿತ್ರ ಕುರ್‌ಆನ್, 3:97) ಎಂದು ಹೇಳಲಾಗಿದೆ.

ಯಾವುದೇ ವೈಭೋಗ ಅಲಂಕಾರವಿಲ್ಲದೆ, ಹೊಲಿಗೆಯಿಲ್ಲದ ಎರಡು ತುಂಡು ಸಾಮಾನ್ಯ ಬಿಳಿ ಬಟ್ಟೆಯನ್ನು (ಇಹ್ರಾಮ್) ಧರಿಸಿ "ಲಬ್ಬೈಕಲ್ಲಾಹುಮ್ಮ ಲಬ್ಬೈಕ್, ಲಬ್ಬೈಕ ಲಾ ಶರೀಕಲಕ ಲಬ್ಬೈಕ್ ಇನ್ನಲ್ ಹಮ್ದ ವನ್ನಿಅ್‌ಮತ ಲಕ ವಲ್ ಮುಲ್ಕ ಲಾ ಶರೀಕಲಕ" (ನಾನು ಹಾಜರಿದ್ದೇನೆ, ಅಲ್ಲಾಹನೇ ನಾನು ಹಾಜರಿದ್ದೇನೆ, ನಿನಗೆ ಸಹಭಾಗಿ ಯಾರೂ ಇಲ್ಲ, ನಾನು ಹಾಜರಿದ್ದೇನೆ, ಒಳಿತು ನಿನಗೇ ಮೀಸಲು ಮತ್ತು ನಿನ್ನ ಆಧಿಪತ್ಯದಲ್ಲಿ ಸಹಭಾಗಿಗಳಿಲ್ಲ) ಎನ್ನುತ್ತಾ ಕಅಬಾ ಪ್ರವೇಶಿಸುವ ಹಜ್ಜ್ ಯಾತ್ರಿಕನು ತನ್ನನ್ನು ಹ.ಇಬ್ರಾಹೀಮರ(ಅ) ಪರಂಪರೆಯೊಂದಿಗೆ ಲೀನವಾಗಿಸಿ ಬಿಡುತ್ತಾನೆ.

ಪ್ರವಾದಿವರ್ಯರೊಡನೆ(ಸ) ಪ್ರಶ್ನಿಸಲಾಯಿತು, ಅತಿ ಶ್ರೇಷ್ಠ ಕರ್ಮ ಯಾವುದು? ಪ್ರವಾದಿ(ಸ) ಹೇಳಿದರು, "ಅಲ್ಲಾಹ್ ಮತ್ತು ಆತನ ರಸೂಲರ ಮೇಲೆ ವಿಶ್ವಾಸ ವಿರಿಸುವುದು." "ತರುವಾಯ ಯಾವುದು?" ಎಂದು ಕೇಳಲಾದಾಗ ಪ್ರವಾದಿ(ಸ) ಹೇಳಿದರು, 'ಮಬ್ರೂರ್ ಹಜ್ಜ್' (ಬುಖಾರಿ, ಮುಸ್ಲಿಮ್) 'ಮಬ್ರೂರ್ ಹಜ್ಜ್' ಎಂದರೆ ಸ್ವೀಕರಿಸ ಲ್ಪಡುವ ಹಜ್ಜ್. ಯಾವುದೇ ತೋರಿಕೆ, ಡಂಬಾಚಾರಗಳಿಲ್ಲದೆ, ಕೇವಲ ಅಲ್ಲಾಹನ ಸಂಪ್ರೀತಿಗಾಗಿ ಕೈಗೊಳ್ಳುವ ಹಜ್ಜ್. ಇಂತಹ 'ಹಜ್ಜ್'ನ ಕುರಿತು ಪ್ರವಾದಿ(ಸ) ಹೇಳಿರುವರು. 'ಹಜ್ಜ್ ಗತ ಪಾಪಗಳೆಲ್ಲವನ್ನೂ ಅಳಿಸಿ ಹಾಕುತ್ತದೆ. (ಮುಸ್ಲಿಮ್)

'ಹಜ್ಜ್' ಸಮಗ್ರ ಆರಾಧನೆಯೆಂದು ಮೌಲಾನಾ ಅಮೀನ್ ಅಹ್ಸನ್ ಇಸ್ಲಾಹಿ ಯವರು ಕರೆದಿದ್ದಾರೆ. ತವಾಫ್ ವಸ್ತುತಃ ನಮಾಝ್‌ನ ಒಂದು ಭಾಗವೇ ಆಗಿದ್ದು ಅದನ್ನು ಕಅಬಾ ಭವನದ ಹೊರತು ಬೇರೆಲ್ಲಿಯೂ ಮಾಡಲು ಸಾಧ್ಯವಿಲ್ಲ. ಈ ಪ್ರಯಾಣದ ವೇಳೆಯಲ್ಲಿ ಸಂಪತ್ತಿನ ಒಂದು ದೊಡ್ಡ ಭಾಗವನ್ನು ವ್ಯಯಿಸಬೇಕಾಗುತ್ತದೆ. 'ಝಕಾತ್' ಎಂದರೆ 'ಹಣ ವೆಚ್ಚ' ಮಾಡುವುದಾಗಿದೆ. 'ಹಜ್ಜ್' ಕರ್ಮದಲ್ಲಿ ಹಣ ವೆಚ್ಚವೂ ವ್ಯಕ್ತವಾಗುತ್ತದೆ. ಭಕ್ತಿ ಮತ್ತು ವಿರಕ್ತಿಯು ಉಪವಾಸದ ಮೂಲಸಾರವಾಗಿದೆ. 'ಇಹ್ರಾಮ್'ನ ನಿಬಂಧನೆಗಳು ಸ್ವಭಾವ ಮತ್ತು ವಿಧಾನದಲ್ಲಿ ಉಪವಾಸಕ್ಕಿಂತ ತುಸು ಕಠಿಣವಾಗಿವೆ. ಆದ್ದರಿಂದ ಉಪವಾಸದ ಉದ್ದೇಶಗಳು ಹಜ್ಜ್‌ನ ಪರಿಪೂರ್ಣತೆಯಾಗಿವೆ.

ಇತರ ಆರಾಧನೆಗಳಾದ 'ಹಿಜ್ರತ್'(ವಲಸೆ) ಮತ್ತು 'ಜಿಹಾದ್'ಗಳೂ ಇದರಲ್ಲಿ ಮೇಳೈಸಿದ್ದು ಈ ರೀತಿಯಲ್ಲಿ 'ಹಜ್ಜ್' ಒಂದು ಸಮಗ್ರ ಆರಾಧನೆಯಾಗಿದೆ ಎಂದು ವಿವರಿಸಿದ್ದಾರೆ.

ಮನುಷ್ಯನನ್ನು ಪ್ರಾಂತೀಯತೆಯಿಂದ ವಿಶ್ವಮಾನವತೆಯೆಡೆಗೆ ಕರೆದೊಯ್ಯುವ ಇಸ್ಲಾಮೀ ಏಕತೆಯ ದೃಷ್ಟಾಂತವನ್ನು ನೀಡುವ ಹಜ್ಜ್ ಒಂದು ವಿಶಿಷ್ಟ ಕಡ್ಡಾಯ ಆರಾಧನಾ ಕರ್ಮವಾಗಿದೆ. ಹಜ್ಜ್‌ನ ಮುಕ್ತಾಯದ ಸಂದರ್ಭದಲ್ಲಿ ನೀಡಲಾಗುವ ಪ್ರಾಣಿ ಬಲಿಯು ಸತ್ಯವಿಶ್ವಾಸಿಯಲ್ಲಿ ಸೃಷ್ಟಿಕರ್ತನ ಸನ್ನಿಧಿಯಲ್ಲಿ ಆತ್ಮ ಸಮರ್ಪಣೆಯ ಭಾವನೆಯನ್ನು ತರಿಸುತ್ತದೆ. ನಿಜವಾದ 'ಜಿಹಾದ್'ನ ಪರಿಕಲ್ಪನೆ ಹಾಗೂ ಪ್ರೇರಣೆಯನ್ನು ನೀಡುತ್ತದೆ.

'ಈದುಲ್ ಫಿತ್ರ್' ಕಡ್ಡಾಯ ಆರಾಧನಾ ಕರ್ಮಗಳಲ್ಲೊಂದಾದ ಉಪವಾಸದ ಸಮಾರೋಪವಾದರೆ, 'ಈದುಲ್ ಅಝ್‌ಹಾ' ಹಜ್ಜ್‌ನ ಸಮಾರೋಪವನ್ನು ಸಾರುತ್ತದೆ.

□ □ □

ಜುಮುಅತುಲ್ ಮುಬಾರಕ್

ಸತ್ಯವಿಶ್ವಾಸಿಗೆ ಕಡ್ಡಾಯಗೊಳಿಸಲ್ಪಟ್ಟ ಆರಾಧನಾ ಕರ್ಮಗಳಲ್ಲಿ ನಮಾಝ್ ಕೂಡಾ ಒಂದು. ಸ್ತ್ರೀ-ಪುರುಷರೆಲ್ಲರಿಗೂ ಇದನ್ನು ಕಡ್ಡಾಯಗೊಳಿಸಲಾಗಿದೆ. "ವಾಸ್ತವದಲ್ಲಿ ನಮಾಝ್, ಸತ್ಯವಿಶ್ವಾಸಿಗಳ ಮೇಲೆ ಸಮಯಪಾಲನೆಯೊಂದಿಗೆ ನೆರವೇರಿಸಲು ವಿಧಿಸಲ್ಪಟ್ಟಿರುವ ಕಡ್ಡಾಯ ವಿಧಿಯಾಗಿರುತ್ತದೆ."

(ಪವಿತ್ರ ಕುರ್‌ಆನ್, 4:103)

ಎಲ್ಲ ಕಡ್ಡಾಯ ನಮಾಝ್‌ಗಳನ್ನು ಸಾಮೂಹಿಕವಾಗಿ ನೆರವೇರಿಸಬೇಕು (ಸ್ತ್ರೀಯರಿಗೆ ವಿನಾಯಿತಿ ಇದೆ). ಶುಕ್ರವಾರದಂದು ಮಧ್ಯಾಹ್ನ ವಿಶೇಷ ಸಾಮೂಹಿಕ ನಮಾಝನ್ನು ಕಡ್ಡಾಯಗೊಳಿಸಲಾಗಿದ್ದು ಅದನ್ನು 'ಜುಮುಅ ನಮಾಝ್' ಎಂದೇ ಕರೆಯಲಾಗುತ್ತದೆ. ಎಲ್ಲ ನಮಾಝ್‌ಗಳನ್ನು ಸಾಮೂಹಿಕವಾಗಿ ನಿರ್ವಹಿಸುವುದು ಕಡ್ಡಾಯವಾಗಿದ್ದು, ವಾಸ್ತವದಲ್ಲಿ ಶುಕ್ರವಾರವು ಸತ್ಯವಿಶ್ವಾಸಿಗಳ ಪಾಲಿಗೆ ವಾರದ ಹಬ್ಬವಾಗಿದೆ.

"ಸತ್ಯವಿಶ್ವಾಸಿಗಳೇ, ಶುಕ್ರವಾರದ ದಿನ ನಮಾಝ್‌ಗೆ ಕರೆಯಲಾದಾಗ ಅಲ್ಲಾಹನ ದಿಕ್ರ್(ಸ್ಮರಣೆ)ನ ಕಡೆಗೆ ಧಾವಿಸಿರಿ ಮತ್ತು ಕ್ರಯ ವಿಕ್ರಯಗಳನ್ನು ಬಿಟ್ಟು ಬಿಡಿರಿ. ನೀವು ಅರಿತವರಾಗಿದ್ದರೆ ಇದು ನಿಮಗೆ ಅತ್ಯುತ್ತಮವಾಗಿದೆ. ನಮಾಝ್ ಮುಗಿದ ಬಳಿಕ ಭೂಮಿಯ ಮೇಲೆ ಚದುರಿ ಬಿಡಿರಿ ಮತ್ತು ಅಲ್ಲಾಹನ ಅನುಗ್ರಹವನ್ನರಸಿರಿ. ಅಲ್ಲಾಹನನ್ನು ಅತ್ಯಧಿಕ ಸ್ಮರಿಸುತ್ತಲಿರಿ ನಿಮಗೆ ಯಶಸ್ಸು ಪ್ರಾಪ್ತವಾಗಲೂಬಹುದು."

(ಪವಿತ್ರ ಕುರ್‌ಆನ್, 62:9-10)

'ಜುಮುಅ ನಮಾಝ್'ಗೆ ನಡೆಸಬೇಕಾದ ಸಿದ್ಧತೆಗಳ ಕುರಿತು ಪ್ರವಾದಿ ಮುಹಮ್ಮದ್‌ರು(ಸ), "ಒಬ್ಬ ಮುಸ್ಲಿಮನು ಶುಕ್ರವಾರದಂದು ಸ್ನಾನ ಮಾಡುತ್ತಾನೆ. ತನ್ನನ್ನು ಪೂರ್ಣವಾಗಿ ಸ್ವಚ್ಛಗೊಳಿಸುತ್ತಾನೆ. ಪರಿಮಳ ಸೂಸುವ ದ್ರವ್ಯವನ್ನು ಪೂಸಿ ಕೊಳ್ಳುತ್ತಾನೆ. ಈ ರೀತಿಯಾಗಿ ಸಿದ್ಧವಾಗಿ ಮಸೀದಿಗೆ ಹೋಗುತ್ತಾನೆ. ಎಡ ಮತ್ತು ಬಲಕ್ಕೆ ಕುಳಿತಿರುವವರಿಗೆ ತೊಂದರೆಯಾಗದ ರೀತಿಯಲ್ಲಿ ಆಸೀನನಾಗುತ್ತಾನೆ. ನಿರ್ವಹಿಸಬೇಕಾದ ನಮಾಝನ್ನು ನಿರ್ವಹಿಸುತ್ತಾನೆ. 'ಇಮಾಮ'ರು ಬಂದೊಡನೆ ಮೌನವಾಗಿ ಅವರ ಪ್ರವಚನವನ್ನು ಆಲಿಸುತ್ತಾನೆ. ಅಲ್ಲಾಹನು ಅವನ ಆ ಹಿಂದಿನ ಶುಕ್ರವಾರದಿಂದ ಆ ಶುಕ್ರವಾರದ ವರೆಗಿನ ಪಾಪಗಳನ್ನು ಮನ್ನಿಸಲಿ." (ಬುಖಾರಿ)

ಶುಕ್ರವಾರದಂದು ಸ್ನಾನವನ್ನು ಕಡ್ಡಾಯವೆಂದು ಸೂಚಿಸಲಾಗಿದೆಯೇ ವಿನಾ ಉಳಿದ ದಿನಗಳಲ್ಲಿ ಸ್ನಾನ ಮಾಡುವ ಅವಶ್ಯಕತೆಯಿಲ್ಲ ಎಂದೇನೂ ಹೇಳಿಲ್ಲ. ಸ್ವಚ್ಛತೆಗಂತೂ ಪ್ರಥಮ ಆದ್ಯತೆ ನೀಡಲಾಗಿದೆಯಷ್ಟೇ. "ಸ್ವಚ್ಛತೆ ಸತ್ಯವಿಶ್ವಾಸದ ಅರ್ಧಾಂಶವಾಗಿದೆ" ಎಂದು ಪ್ರವಾದಿ(ಸ) ಹೇಳಿದ್ದಾರೆ.

ಹ. ಅಬೂ ಹುರೈರಾ(ರ) ವರದಿ ಮಾಡಿರುವಂತೆ- ಪ್ರವಾದಿ(ಸ) ಹೇಳಿದರು, "ಶುಕ್ರವಾರದಂದು ಒಂದು ಘಳಿಗೆಯಿರುವುದು, ಆ ಸಮಯದಲ್ಲಿ ಅಲ್ಲಾಹನ ದಾಸರು ಮಾಡುವ ಪ್ರತಿಯೊಂದು ಪ್ರಾರ್ಥನೆಯನ್ನು ಸ್ವೀಕರಿಸಲಾಗುವುದು, ಆ ಸಮಯವು ಅತ್ಯಂತ ಕಡಿಮೆ ಅವಧಿಯದ್ದಾಗಿರುತ್ತದೆ ಎಂಬುದಾಗಿ ತನ್ನ ಎರಡು ಕೈ ಬೆರಳುಗಳ ಮೂಲಕ ಸಂಕೇತಿಸಿದರು."

ವಾರದಲ್ಲಿ ಕೇವಲ ಶುಕ್ರವಾರವನ್ನು ಉಪವಾಸ ವ್ರತಕ್ಕಾಗಿ ಆಯ್ಕೆ ಮಾಡುವುದು 'ಮಕ್ರೂಹ್'(ಅನಪೇಕ್ಷಣೀಯ) ಆಗಿದೆ. ಆದರೆ ಒಬ್ಬನು ಹಿಂದಿನ ಅಥವಾ ಮುಂದಿನ ದಿನವೂ ಉಪವಾಸ ಆಚರಿಸಿದರೆ ಅದು 'ಮಕ್ರೂಹ್' (ಅನಪೇಕ್ಷಣಿಯ) ಆಗುವುದಿಲ್ಲ. ಶುಕ್ರವಾರ 'ಆಶೂರಾ' (ಮುಹರ್ರಮ್ 10ನೆಯ ತಾರೀಕು) ಅಥವಾ 'ಅರಫಾ' ದಿನ (ಹಜ್ಜ್‌ನ ಸಂದರ್ಭದಲ್ಲಿ ಅರಫಾತ್‌ನ ಮೈದಾನದಲ್ಲಿ ಹಜ್ಜ್ ಯಾತ್ರಿಕರು ಒಟ್ಟಾಗಿ ಪ್ರಾರ್ಥಿಸುವ ದಿನ) ಬಂದರೂ ಅದು 'ಮಕ್ರೂಹ್' ಆಗುವುದಿಲ್ಲ. ಒಬ್ಬನು ತನ್ನ ವಾಡಿಕೆಯಂತೆ ಉಪವಾಸ ಆಚರಿಸುತ್ತಿದ್ದು ಅದರಲ್ಲಿ ಶುಕ್ರವಾರದ ದಿನ ಬಂದರೆ ಅದೂ ಮಕ್ರೂಹ್ ಆಗುವುದಿಲ್ಲ.

'ಈದುಲ್ ಫಿತ್ರ್' ಮತ್ತು 'ಈದುಲ್ ಅಝ್‌ಹಾ'ದ ದಿನಗಳು ಒಂದು ವೇಳೆ ಶುಕ್ರವಾರದಂದೇ ಬಂದರೆ, ಹ. ಅಬೂ ಹುರೈರಾ(ರ) ವರದಿ ಮಾಡಿರುವಂತೆ ಪ್ರವಾದಿ(ಸ), "ಎರಡು ಹಬ್ಬಗಳು ಇಂದು ಒಟ್ಟಿಗೆ ಬಂದಿವೆ, ನಿಮ್ಮಲ್ಲಿ ಯಾರಾದರೂ ಬಯಸಿದರೆ ಇದರ ಮೇಲೆ ಜುಮುಅ ನಮಾಝ್ ನಿರ್ವಹಿಸಬೇಕಾಗಿಲ್ಲ. ಆದರೆ ನಾವು ಜುಮುಅ ನಮಾಝನ್ನು ನಿರ್ವಹಿಸಲು ಹೋಗುತ್ತಿದ್ದೇವೆ" ಎಂದು ಹೇಳಿರುವರು.

ಹನಫೀ ಮತ್ತು ಮಾಲಿಕಿ ವಿದ್ವಾಂಸರು ಎರಡೂ ನಮಾಝ್‌ಗಳು ಕಡ್ಡಾಯವೆಂದು ಹೇಳಿರುವರು.

ಅನುಕೂಲವಿದ್ದಲ್ಲಿ ಸ್ತ್ರೀಯರು ಸಾಮೂಹಿಕ ನಮಾಝ್‌ಗಳಲ್ಲಿ, ಜುಮುಅ ಹಾಗೂ ಈದ್ ನಮಾಝ್‌ಗಳಲ್ಲಿ ಪ್ರತ್ಯೇಕ ವ್ಯವಸ್ಥೆಯೊಂದಿಗೆ ಭಾಗವಹಿಸಬಹುದಾಗಿದೆ.

ಎಲ್ಲಾ ಸಮುದಾಯಗಳೂ ಸಾಮೂಹಿಕ ವಿಶೇಷ ಆರಾಧನೆಗಾಗಿ ವಾರದಲ್ಲೊಂದು ದಿನವನ್ನು ನಿರ್ಣಯಿಸಿವೆ. ಯಹೂದಿಯರು 'ಸಬ್ತ್'ನ ದಿನ ಅರ್ಥಾತ್ ಶನಿವಾರವನ್ನು ಆಯ್ಕೆ ಮಾಡಿದರೆ, ಕ್ರೈಸ್ತರು ಆದಿತ್ಯವಾರವನ್ನು ಆಯ್ಕೆ ಮಾಡಿದ್ದಾರೆ. ಮುಸ್ಲಿಮರು ಶುಕ್ರವಾರದಂದು ಸಾಮೂಹಿಕ ಆರಾಧನೆ(ವಿಶೇಷ)ಯನ್ನು ನಿರ್ವಹಿಸುತ್ತಾರೆ. ಮುಸ್ಲಿಮರು ಶುಕ್ರವಾರದಂದು ಕಡ್ಡಾಯಗೊಳಿಸಲಾದ 'ವಿಶೇಷ ಸಾಮೂಹಿಕ ಆರಾಧನೆ' ಅರ್ಥಾತ್ 'ಜುಮುಅ ನಮಾಝ್'ನ್ನು ನೆರವೇರಿಸುತ್ತಾರೆ. ಸಾಮಾನ್ಯವಾಗಿ ಅಂದು ಮನೆಗಳಲ್ಲಿ ಉತ್ತಮ ಅಡಿಗೆಯನ್ನು ಮಾಡಲಾಗುತ್ತದೆ ಹಾಗೂ ಹಬ್ಬದ ವಾತಾವರಣವಿದ್ದು, ಶುಕ್ರವಾರವು 'ಈದುಲ್ ಮೂಮಿನೀನ್' ಎನಿಸಿಕೊಳ್ಳುತ್ತದೆ.

❑ ❑ ❑

ಈದ್‌ನ ಆಚರಣಾ ವಿಧಿಗಳು

ಪ್ರವಾದಿ ಮುಹಮ್ಮದ್(ಸ) ಮದೀನಾಕ್ಕೆ ಬಂದಾಗ ಅನ್ಸಾರರು ಮೊದಲಿನಿಂದಲೂ ಎರಡು ಹಬ್ಬಗಳನ್ನು ಆಚರಿಸುತ್ತಿದ್ದರು. "ಆ ಎರಡು ಹಬ್ಬಗಳ ಬದಲಿಗೆ ಅಲ್ಲಾಹನು ಎರಡು ಉತ್ತಮ ದಿನಗಳನ್ನು ನಿಶ್ಚಯಿಸಿದ್ದು ಅವು 'ಈದುಲ್ ಪಿತ್ರ್' ಮತ್ತು 'ಈದುಲ್ ಅಝ್‌ಹಾ' ಆಗಿವೆ." (ಅಬೂದಾವೂದ್)

1. ಗುಸ್ಲ್(ಸ್ನಾನ)

ಹ. ಸಈದ್ ಇಬ್ನ್ ಝುಬೇರ್ ಹೇಳಿರುವರು, "ಈದ್‌ನಂದು 3 ಕಾರ್ಯಗಳನ್ನು ನೆರವೇರಿಸುವುದು ಪ್ರವಾದಿಚರ್ಯೆಯಾಗಿದೆ. ಅವು ಯಾವುವೆಂದರೆ, ಪ್ರಾರ್ಥನಾ ಸ್ಥಳದ ವರೆಗೆ ನಡೆಯುವುದು, ಸ್ನಾನ ಮಾಡುವುದು ಮತ್ತು ಪ್ರಾರ್ಥನೆಗಾಗಿ ಹೊರಡುವ ಮುನ್ನ ಏನನ್ನಾದರೂ ತಿನ್ನುವುದು (ಈದುಲ್ ಫಿತ್ರ್)."

2. ತನ್ನಲ್ಲಿಯ ಅತ್ಯಂತ ಶ್ರೇಷ್ಠ ಉಡುಪುಗಳನ್ನು ಧರಿಸುವುದು

ಹ. ಜಾಬಿರ್(ರ) ವರದಿ ಮಾಡಿರುವಂತೆ, "ಪ್ರವಾದಿವರ್ಯರ(ಸ) ಬಳಿ ಒಂದು ಜುಬ್ಬಾ ಇತ್ತು. ಅದನ್ನು ಅವರು ಈದ್ ಮತ್ತು ಜುಮುಅದಂದು ಧರಿಸುತ್ತಿದ್ದರು."

ಅಲ್‌ಬೈಹಕಿ ವರದಿ ಮಾಡಿರುವಂತೆ ಹ. ಇಬ್ನ್ ಉಮರ್ ಈದ್‌ನ ದಿನದಂದು ತಮ್ಮ ಶ್ರೇಷ್ಠ ಉಡುಪುಗಳನ್ನು ಧರಿಸುತ್ತಿದ್ದರು.

3. ಈದ್ಗಾಹ್‌ಗೆ ಹೋಗಲು ಮನೆಯಿಂದ ಹೊರಬರುವ ಮುನ್ನ ಏನನ್ನಾದರೂ ತಿನ್ನುವುದು

ಹ. ಅನಸ್ ಇಬ್ನ್ ಮಾಲಿಕ್(ರ) ವರದಿ ಮಾಡಿರುವರು, "ಪ್ರವಾದಿ ಮುಹಮ್ಮದರು(ಸ) ಈದುಲ್ ಫಿತ್ರ್‌ನ ದಿನದಂದು ಖರ್ಜೂರಗಳನ್ನು ಸೇವಿಸದೇ ಹೊರಬರುತ್ತಿರಲಿಲ್ಲ ಹಾಗೂ ಸಾಮಾನ್ಯವಾಗಿ ಬೆಸ ಸಂಖ್ಯೆಯಲ್ಲಿ ಖರ್ಜೂರಗಳನ್ನು ಸೇವಿಸುತ್ತಿದ್ದರು." (ಬುಖಾರಿ)

ಈದುಲ್ ಅಝ್‌ಹಾದಂದು ಈದ್‌ನ ನಮಾಝ್‌ನ ಬಳಿಕ ಕುರ್ಬಾನಿಯ ಪ್ರಾಣಿಯ ದಿಬಹ್‌ನ ನಂತರ, ಅದರಿಂದಲೇ ಏನನ್ನಾದರೂ ಮೊದಲು ತಿನ್ನುವುದು ಅಪೇಕ್ಷಣೀಯವಾಗಿದೆ.

4. ತಕ್ಬೀರ್ ಹೇಳುವುದು

ದಾರಕುತ್ನಿ ವರದಿ ಮಾಡಿರುವಂತೆ ಹ. ಇಬ್ನ್ ಉಮರ್ ಈದುಲ್ ಫಿತ್ರ್ ಮತ್ತು ಈದುಲ್ ಅಝ್‌ಹಾದಂದು ಮನೆಯಿಂದ ಹೊರಬಂದು ನಮಾಝ್‌ನ ಸ್ಥಳಕ್ಕೆ ತಲುಪುವ ವರೆಗೆ ತಕ್ಬೀರ್‌ಗಳನ್ನು ಹೇಳುತ್ತಿದ್ದರು,' ನಂತರ ಇಮಾಮ್ ಬರುವ ವರೆಗೆ ಅದನ್ನು ಮುಂದುವರಿಸುತ್ತಿದ್ದರು.

5. ಈದ್ಗಾಹ್‌ಗೆ ಸಾಗಲು ಮತ್ತು ಹಿಂತಿರುಗಲು ವಿಭಿನ್ನ ದಾರಿ ಬಳಸುವುದು

ಹ. ಜಾಬಿರ್ ಇಬ್ನ್ ಅಬ್ದುಲ್ಲಾ(ರ) ವರದಿ ಮಾಡಿರುವಂತೆ, ಪ್ರವಾದಿ ಮುಹಮ್ಮದ್(ಸ) ಈದ್‌ನ ದಿನದಂದು ಈದ್‌ಗಾಗೆ ಸಾಗಲು ಮತ್ತು ಹಿಂತಿರುಗಲು ವಿಭಿನ್ನ ದಾರಿಗಳನ್ನು ಬಳಸುತ್ತಿದ್ದರು. (ಬುಖಾರಿ)

6. ನಫಿಲ್ ನಮಾಝ್

ಈದ್‌ನ ನಮಾಝ್‌ಗಿಂತ ಮುಂಚೆ ಮತ್ತು ನಂತರ ಯಾವುದೇ ನಫಿಲ್ ನಮಾಝ್ ಮಾಡಬೇಕಾಗಿಲ್ಲ. ಆದರೆ ಈದ್‌ನ ನಮಾಝನ್ನು ಮಳೆ ಹಾಗೂ ಇನ್ನಿತರ ಕಾರಣಗಳಿಂದ ಈದ್‌ಗಾ ಮೈದಾನದಲ್ಲಿ ನಿರ್ವಹಿಸಲಾಗದೆ, ಮಸೀದಿಯಲ್ಲಿ ನಿರ್ವಹಿಸಿದರೆ ಎರಡು ರಕಅತ್ 'ತಹಿಯ್ಯತುಲ್ ಮಸ್ಜಿದ್' ನಮಾಝನ್ನು ನಿರ್ವಹಿಸಬಹುದು.

7. ಈದ್‌ನ ನಮಾಝ್ ನಿರ್ವಹಿಸುವುದು

ಹನಫೀ ವಿದ್ವಾಂಸ ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯಾ, ಈದ್‌ನ ನಮಾಝ್ ಕಡ್ಡಾಯವೆಂದು ಪರಿಗಣಿಸಿದರೆ, 'ಹಂಬಲಿ' ವಿದ್ವಾಂಸರು 'ಫರ್ಝ್ ಕಿಫಾಯಾ' (ಸಮುದಾಯದ ಕೆಲವರು ನಿರ್ವಹಿಸಿದರೆ ಇನ್ನಿತರರ ಮೇಲಿಂದ ಬಾಧ್ಯತೆ ನೀಗುವುದು) ಎಂದೂ 'ಮಾಲಿಕ್' ಮತ್ತು 'ಶಾಫಿಈ' ವಿದ್ವಾಂಸರು 'ಸುನ್ನತು ಮುಅಕ್ಕಿದಃ' (ಪ್ರಬಲ ಪ್ರವಾದಿಚರ್ಯೆ) ಎಂದೂ ಪರಿಗಣಿಸುತ್ತಾರೆ.

8. ಪರಸ್ಪರ ಶುಭಾಶಯ ಕೋರುವುದು

ಹ. ಜುಬೈರ್ ಇಬ್ನ್ ನುಫೈರ್(ರ) ವರದಿ ಮಾಡಿರುವಂತೆ, ಪ್ರವಾದಿಯವರ(ಸ) ಕಾಲದಲ್ಲಿ ಈದ್‌ನ ದಿನ ಪರಸ್ಪರ 'ತಕಬ್ಬಲಲ್ಲಾಹು ಮಿನ್ನೀ ವ ಮಿನ್ಕ' [ಅಲ್ಲಾಹನು ಸ್ವೀಕರಿಸಲಿ, ನನ್ನ ಹಾಗೂ ನಿಮ್ಮದನ್ನು (ಆರಾಧನೆ)] ಎಂದು ಪರಸ್ಪರ ಪ್ರಾರ್ಥಿಸುತ್ತಿದ್ದರು. (ಮುಸ್ನದ್ ಅಹ್ಮದ್)

9. ಉಪವಾಸ ನಿಷಿದ್ಧ

ಈದ್‌ನ ದಿನದಂದು ಉಪವಾಸವಿರುವುದನ್ನು ನಿಷೇಧಿಸಲಾಗಿದೆ. ಹ. ಅಬೂ ಸಈದ್ ಅಲ್ ಖುದ್ರಿ(ರ) ವರದಿ ಮಾಡಿರುವಂತೆ, "ಪ್ರವಾದಿಯವರು(ಸ) ಈದುಲ್ ಫಿತ್ರ್ ಮತ್ತು ಈದುಲ್ ಅಝ್‌ಹಾ ದಿನಗಳಂದು ಉಪವಾಸವಿರುವುದನ್ನು ನಿಷೇಧಿಸಿದ್ದಾರೆ." (ಮುಸ್ಲಿಮ್)

□ □ □